Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

## ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ನಿರ್ವಹಣೆಯಲ್ಲಿ ಪ್ರಮುಖ ದಿನಾಂಕಗಳು

| | |
|---|---|
| ಏಪ್ರಿಲ್ 30 | ಸದಸ್ಯರ ರಜಿಸ್ಟರ್ – ಅಧಿನಿಯಮ 1997 ಕಲಂ 23(ಡ) ಸೌಹಾರ್ದ ಸಂಯುಕ್ತ ಸಹಕಾರಿಗೆ ಆರ್ಥಿಕ ಅಂಕಿ ಅಂಶಗಳನ್ನು ಕಳಿಸುವದು (ಸುತ್ತೋಲೆ 10–4–2006) ಅರ್ಹ ಮತದಾರರ ಪಟ್ಟಿ ಪ್ರಕಟನೆ ಅಧಿನಿಯಮ 1997 ಕಲಂ 32(1)(ಡ) |
| ಮೇ 31 | ಮೇ 31 ರೊಳಗೆ ಲೆಕ್ಕ ಪರಿಶೋಧನೆಗಾಗಿ ಕರಡು ಲೆಕ್ಕ ಪತ್ರ ತಯಾರಿಸಿ ಸಾದರಪಡಿಸುವದು. – ಅಧಿನಿಯಮ 1997 ಕಲಂ 31(ಎಫ್) ಮತ್ತು 33(3) |
| ಸಪ್ಟೆಂಬರ್ 30 | ವಾರ್ಷಿಕ ಸಾಮಾನ್ಯ ಸಭೆ ಸಪ್ಟೆಂಬರ್ 30 ರೊಳಗೆ (ಅಧಿ ನಿಯಮ 1997 ಕಲಂ 30) |
| ಅಕ್ಟೋಬರ್ 15 | ಅಕ್ಟೋಬರ್ 15 ಅಥವಾ ವಾರ್ಷಿಕ ಸಾಮಾನ್ಯ ಸಭೆಯಿಂದ 15 ದಿನಗಳಲ್ಲಿ ಸಹಕಾರಿ ಶಿಕ್ಷಣ ನಿಧಿ 1% + 2% ಸೌಹಾರ್ದ ಸಂಯುಕ್ತ ಸಹಕಾರಿಗೆ ಕಳಿಸುವದು. |
| ಅಕ್ಟೋಬರ್ 31 | ಅಧಿನಿಯಮ ಕಲಂ 34 ರಂತೆ ನಿಬಂಧಕರಿಗೆ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಗೆ ಮಾಹಿತಿಗಳನ್ನು ಕಳಿಸುವದು. |
| ಸಪ್ಟೆಂಬರ್ 30 | ಅಧಿನಿಯಮ ಕಲಂ 62 ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ಉಪವಿಧಿ (ಬೈಲಾ) ಕಲಂ 37 ರಂತೆ ವಾರ್ಷಿಕ ಶುಲ್ಕವನ್ನು ಕಳುಹಿಸುವದು. |

## ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗಮನಿಸಬೇಕಾದ ಪ್ರಮುಖ ಸಂಗತಿಗಳು

* ಲೆಕ್ಕ ಪರಿಶೋಧನೆ ಹಾಗೂ ಸಾಮಾನ್ಯ ಸಭೆಯು ನಿಗದಿತ ಸಮಯದಲ್ಲಿ ನಡೆಯುವಂತೆ ನೋಡಿಕೊಳ್ಳುವುದು.
* ಆಡಳಿತ ಮಂಡಳಿ ಮತ್ತು ಸಾಮಾನ್ಯ ಸಭೆಯ ನಡುವಳಿಕೆಗಳನ್ನು ದಾಖಲಿಸುವುದು.
* ಆಡಳಿತ ಮಂಡಳಿಯ ಚುನಾವಣೆಯು ನಿಗದಿತ ಸಮಯದಲ್ಲಿ ನಡೆಯುವಂತೆ ನೋಡಿಕೊಳ್ಳುವುದು.
* ಸಂಯುಕ್ತ ಸಹಕಾರಿಗೆ ಪ್ರತಿವರ್ಷ ಅಕ್ಟೋಬರ 15 ರ ಒಳಗೆ ವಾರ್ಷಿಕ ಶುಲ್ಕ,ಶಿಕ್ಷಣ ನಿಧಿ,ಲೆಕ್ಕ ಪರಿಶೋಧನಾ ವರದಿ ಸಲ್ಲಿಸುವುದು.
* ಅಕ್ಟೋಬರ 31 ರೊಳಗೆ ನಿಬಂಧಕರಿಗೆ ಕಾಯ್ದೆ ಕಲಂ 34 ರಡಿಯಲ್ಲಿ ಮಾಹಿತಿ ಸಲ್ಲಿಸುವುದು.
* ಸಹಕಾರಿಯ ಎಲ್ಲ ಚಟುವಟಿಕೆಗಳು ಕಾಯ್ದೆ, ನಿಯಮ, ಉಪವಿಧಿಗಳನ್ವಯ ನಡೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು. ಏನೇ ವ್ಯತ್ಯಾಸವಿದ್ದಲ್ಲಿ, ಆಡಳಿತ ಮಂಡಳಿ ಗಮನಕ್ಕೆ ತಂದು ಸರಿಪಡಿಸಿಕೊಳ್ಳತಕ್ಕದ್ದು.

## ಅಪರಾಧಗಳು ಮತ್ತು ದಂಡಗಳು

ಉಪವಿಧಿಗಳಲ್ಲಿ ವಿಧಿಸಲಾದ ಶಾಸನಬದ್ಧ ಪ್ರಕಾರ್ಯಗಳನ್ನು ಮಾಡಲು ತಪ್ಪಿದರೆ, – ಗರಿಷ್ಟ ರೂ. 5000/– ದಂಡ ಅಥವಾ ಮತ್ತು ಗರಿಷ್ಠ 1 ವರ್ಷ ಶಿಕ್ಷೆ. ಅಧಿನಿಯಮ 1997 ಕಲಂ 68(1)

ನಿಧಿ ದುರುಪಯೋಗ, ಚುನಾವಣಾ ಅಕ್ರಮ, ಲೆಕ್ಕ ಪರಿಶೋಧನೆಗೆ ಮಾಹಿತಿ ಒದಗಿಸದೇ ಇರುವುದು ಸಂಯುಕ್ತ ಸಹಕಾರಿ ನಿಧಿಗೆ ವಂತಿಗೆ ನೀಡದೇ ಇರುವದು ಇತ್ಯಾದಿ ಅಪರಾಧಗಳಿಗೆ ಗರಿಷ್ಠ ₹ 1000/– ದಂಡ, ಮತ್ತು / ಅಥವಾ ಗರಿಷ್ಠ 2 ವರ್ಷ ಶಿಕ್ಷೆ ಅಧಿನಿಯಮ 1997 ಕಲಂ 68(2)

## ಸಂಯುಕ್ತ ಸಹಕಾರಿಯ ಲ್ಯಾಂಡ್‌ಲೈನಗಳಿಗೆ ಕರೆಮಾಡಿ



ಸಂಯುಕ್ತ ಸಹಕಾರಿಯ ಕಚೇರಿಯ ಒಳಾಂಗಣದಲ್ಲಿ ಮೊಬೈಲ್ ಕರೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಿಲ್ಲ. ಹೀಗಾಗಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹಕಾರಿಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅನೇಕರು ಭಾವಿಸಲು ಕಾರಣವಾಗಿದೆ. ಆದ್ದರಿಂದ ಸಂಯುಕ್ತ ಸಹಕಾರಿಯ ಕಚೇರಿಗೆ ಕರೆಮಾಡಲಿಚ್ಛಿಸುವವರು ಅಧಿಕಾರಿಗಳ ಮೊಬೈಲ್‌ಗಳಿಗೆ ಕರೆಮಾಡದೆ ಲ್ಯಾಂಡ್‌ಲೈನ್‌ಗೆ ಕರೆಮಾಡಲು ಕೋರಿದೆ. ಸಂಯುಕ್ತ ಸಹಕಾರಿಯ ಲ್ಯಾಂಡ್‌ಲೈನ್‌ನ ಸಂಖ್ಯೆಗಳು ಈ ರೀತಿ ಇವೆ.

ಕೋಡ್ ಸಂಖ್ಯೆ : 080–23378375 ರಿಂದ 80 ರವರೆಗೆ 6 ಲೈನ್‌ಗಳಲ್ಲಿ ಯಾವುದಾದರೊಂದು ಸಂಖ್ಯೆಗೆ ಕರೆಮಾಡಿ ಮಾಹಿತಿ ಪಡೆಯಬಹುದಾಗಿದೆ.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831–2401551

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,** ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 560010.
ದೂರವಾಣಿ ಸಂಖ್ಯೆಗಳು :
23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,** ಸಂಚಿಕೆ ಸಿದ್ಧತೆ **ವಿ.ಜೆ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 : ಸಂಚಿಕೆ 7 : ಜುಲೈ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- : ಬೆಲೆ ₹ 5



## ನಂದಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಇ-ಸ್ಟಾಂಪಿಂಗ್ ಕೇಂದ್ರ ಉದ್ಘಾಟನೆ

ಶ್ರೀ ಸಿದ್ದೇಶ್ವರ ಸ್ವಾಮಿಗಳೊಂದಿಗೆ ಮಾನ್ಯ ಇಂಧನ ಮತ್ತು ಆಹಾರ ಖಾತೆ ಸಚಿವೆ ಶೋಭಾ ಕರಂದ್ಲಾಜೆ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಸಂಘಟನಾ ಕಾರ್ಯದರ್ಶಿಳಾದ ಶ್ರೀ ಎನ್. ರವಿಕುಮಾರ್, ಜಿ.ಜೆ.ಪಿ ರಾಜ್ಯಉಪಾಧ್ಯಕ್ಷರು ಮತ್ತು ಪ.ಪಂ.ಗಳ ಅಭಿವೃದ್ಧಿ ನಿ., ಅಧ್ಯಕ್ಷ ಡಾ॥ ಮಂಗಳ ಶ್ರೀಧರ್, ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಶರಣಗೌಡ ಪಾಟೀಲ್ ಅವರುಗಳು ಇದ್ದಾರೆ.



ಧಾರವಾಡ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಹತ್ತು ದಿನಗಳ ತರಬೇತಿ ಕಾರ್ಯಕ್ರಮ ಎಂ.ಎಲ್.ಸಿ. ಹಾಗೂ ಮಾರಾಟ ಮಹಾ ಮಂಡಳಿಯ ಅಧ್ಯಕ್ಷರಾದ ಶ್ರೀ ಹಾಲಪ್ಪ ಆಚಾರ್ ಅವರಿಂದ ಉದ್ಘಾಟನೆ.



ಸೌಹಾರ್ದ ಸಹಕಾರಿಗೆ ಭೇಟಿ : ಸಹಕಾರಿ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಸತೀಶ್ ಮರಾಠೆ, ರಾಜ್ಯ ಉತ್ತರ ಪ್ರಾಂತ ಅಧ್ಯಕ್ಷ ಶ್ರೀ ಚೊಕ್ಕ ಬಸವನಗೌಡ ಮತ್ತು ಕಾರ್ಯದರ್ಶಿ ಶ್ರೀ ರಮೇಶ್ ವೈದ್ಯ ಅವರೊಂದಿಗೆ ಸೌಹಾರ್ದ ಸಹಕಾರಿ ಸಿಬ್ಬಂದಿ ವರ್ಗದವರಿದ್ದಾರೆ.

### ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ ....2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ....3
ಸೌಹಾರ್ದ ಸಹಕಾರಿ ಚಟುವಟಿಕೆಗಳು ....4
ಲೇಖನ ....5
ನಿಬಂಧಕರ ಸುತ್ತೋಲೆಗಳು ....6
10 ದಿನಗಳ ತರಬೇತಿ ಕಾರ್ಯಕ್ರಮ ....7,8,9,10
ಶಾಸನಬದ್ದ ಕಾರ್ಯಗಳು (ಲೇಖನ) ....11
ಸೌಹಾರ್ದ ಸಹಕಾರಿಗಳ ಕಾಯ್ದೆ ಪ್ರಸ್ತುತತೆ ....12,13
ಲೇಖನ ....14,15
ಸೌಹಾರ್ದ ಸಹಕಾರಿ ಪರಿಚಯ ....16



# ಅಧ್ಯಕ್ಷರ ನುಡಿ . . .

ಎಸ್.ಆರ್. ಸತೀಶಚಂದ್ರ



## ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಕಾಯ್ದೆಯ ತಿದ್ದುಪಡಿ ಅವಶ್ಯ

> ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈ 10 ವರ್ಷಗಳಲ್ಲಿ 1700 ಕ್ಕೂ ಹೆಚ್ಚು ಸಹಕಾರಿಗಳು ರಚನೆಯಾಗಿ ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರ ಹಾಗೂ ಸರಕಾರದ ಮೆಚ್ಚುಗೆಯನ್ನು ಗಳಿಸಿವೆ. ಇ-ಸ್ಟಾಂಪಿಂಗ್‌ನಂತಹ ಸರಕಾರದ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ರೂ. 1 ಕೋಟಿಗೂ ಹೆಚ್ಚು ಆದಾಯವನ್ನು ಗಳಿಸಿಕೊಡುವಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಮಹತ್ವದ್ದಾಗಿದೆ.

ಕಳೆದ ಕೆಲವು ದಿನಗಳಿಂದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಕೊಡಲು ಬೇಡಿಕೆ ಸಲ್ಲಿಸುತ್ತಿರುವದನ್ನು ಪರಿಶೀಲಿಸಿ ಸರಕಾರ ಸೌಹಾರ್ದ ಸಹಕಾರಿ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರಲು ಮುಂದಾಗಿದ್ದಾರೆ. ಇದು ಸಂತೋಷದ ವಿಷಯ. ಅದಕ್ಕಾಗಿ ಸಂಯುಕ್ತ ಸಹಕಾರಿಯು ಅವರನ್ನು ಅಭಿನಂದಿಸುತ್ತದೆ ಹಾಗೂ ಆದಷ್ಟು ಬೇಗ ಈ ಪ್ರಕ್ರೀಯೆ ಪೂರ್ಣಗೊಳ್ಳಲು ಕ್ರಮವಿಡುವಂತೆ ವಿನಂತಿಸುತ್ತದೆ.

ಇದೇ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಧ್ಯೇಯಗಳಿಗೆ ಕಾಯ್ದೆಯ ರಚನಾಕಾರರು ನೀಡಿದ ಮಹತ್ವ ಹಾಗೂ ಮಾನ್ಯತೆಯನ್ನು ಗಮನಿಸಲು ಮರೆಯಬಾರದೆಂದು ಸಂಯುಕ್ತ ಸಹಕಾರಿಯ ಕಳಕಳಿಯ ಮನವಿ.

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು ಕೇವಲ 10 ವರ್ಷಗಳಾಗಿವೆ. ಈ ಹತ್ತು ವರ್ಷಗಳಲ್ಲಿ ದೊರೆತ ಪ್ರೋತ್ಸಾಹ ಹಾಗೂ ಅವಕಾಶದಲ್ಲಿ ಸಾಧಿಸಿದ ಪ್ರಗತಿ ಪ್ರಶಂಸನೀಯ ಎಂಬುದನ್ನು ಗಮನಿಸಬೇಕು. ಕೆಲವು ಆಡಳಿತಾತ್ಮಕ ಲೋಪದೋಷಗಳಾಗಿರಬಹುದು. ಇವುಗಳನ್ನು ಸರಿಪಡಿಸಲು ಅವಕಾಶ ಬೇಕು. ಹಾಗೆ ನೋಡಿದರೆ 107 ವರ್ಷಗಳ ಇತಿಹಾಸವಿರುವ ಹಳೆಯ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಸರಕಾರದ ಬೃಹತ್ ಸಹಕಾರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಕ್ರೆಡಿಟ ಸಹಕಾರ ಸಂಘಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಬಿಟ್ಟು ಉಳಿದವುಗಳಲ್ಲಿ ಬಹುತೇಕ ಹೆಚ್ಚಿನವು ನಷ್ಟದಲ್ಲಿವೆ. ಅನೇಕ ರೀತಿಯ ಲೋಪದೋಷಗಳಾಗುತ್ತಿವೆ. ವಾರ್ಷಿಕ ಕೇವಲ 65-70% ಸಹಕಾರ ಸಂಘಗಳಲ್ಲಿ ಮಾತ್ರ ಲೆಕ್ಕ ಪರಿಶೋಧನೆಯಾಗುತ್ತಿವೆ. ಕೆಲವು ಸಹಕಾರ ಸಂಘಗಳಲ್ಲಿ ಕೆಲವು ವರ್ಷಗಳ ಲೆಕ್ಕಪರಿಶೋಧನೆ ಬಾಕಿಯಿದೆ.

ಆದರೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಡ್ಡಾಯವಾಗಿ ಲೆಕ್ಕಪರಿಶೋಧನೆ ನಡೆಯುತ್ತಿದೆ ಎಲ್ಲ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ಕಡ್ಡಾಯವಾಗಿ ಜರುಗಿಸುವಂತೆ ಕ್ರಮವಿಡಲಾಗುತ್ತಿದೆ. ಸಂಯುಕ್ತ ಸಹಕಾರಿಯು ತನ್ನ ವ್ಯಾಪ್ತಿಯಲ್ಲಿ ಇರುವ ಅವಕಾಶಗಳಲ್ಲಿ ಕಾನೂನು ಬದ್ದ ಕ್ರಮಜರುಗಿಸುತ್ತ ಎಲ್ಲ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾನೂನು ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವಂತೆ ಕ್ರಮವಿಡಲು ಪ್ರಯತ್ನಿಸುತ್ತಿದೆ. ಇವೆಲ್ಲವುಗಳನ್ನು ಗಮನಿಸಿ ಸಂಯುಕ್ತ ಸಹಕಾರಿಗೆ ಕಾನೂನು ಬದ್ದ ಕ್ರಮ ಜರುಗಿಸುವ ಸಂಯುಕ್ತ ಸಹಕಾರಿಯನ್ನು ಆರ್ಥಿಕವಾಗಿ ಬಲಪಡಿಸುವ ಮತ್ತು ಹೆಚ್ಚಿನ ವ್ಯಾಪ್ತಿಯನ್ನು ಕಲ್ಪಿಸುವ ತಿದ್ದುಪಡಿಗಳನ್ನು ಅಳವಡಿಸಲು ಸರಕಾರ ಮುಂದಾಗುವುದು ಅವಶ್ಯಕವೆನಿಸುತ್ತದೆ. ಸಂಯುಕ್ತ ಸಹಕಾರಿಯ ಸಮರ್ಥ ಕಾರ್ಯಾಚರಣೆಗೆ 10 ವರ್ಷಗಳ ಅವಧಿ ಏನೇನೂ ಸಾಲದು. ಹೆಚ್ಚಿನ ಕಾಲಾವಕಾಶ ಅಗತ್ಯ.

ಮತ್ತೊಂದು ವಿಷಯ. ಪ್ರೊ.ವೈದ್ಯನಾಥನ್ ಕಮಿಟಿಯ ಶಿಫಾರಸಿನಂತೆ ಕೃಷಿ ಸಹಕಾರ ಸಂಘಗಳ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ಕೊಡಲು ಕ್ರಮವಿಡುತ್ತಿರುವ ಸರಕಾರ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆಯನ್ನು ಕಡಿತಗೊಳಿಸುವ ಕ್ರಮ ಅನವಶ್ಯಕವೆಂದು ಅನಿಸುತ್ತದೆ. ಇಂಥ ಕ್ರಮಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಲಾರದು. ಬದಲಿಗೆ ಈ ಕ್ಷೇತ್ರದ ಬೆಳವಣಿಗೆ ಕುಂಠಿತವಾಗುತ್ತದೆ ಎಂಬುದನ್ನು ಗಮನಿಸಬೇಕು.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈ 10 ವರ್ಷಗಳಲ್ಲಿ 1700 ಕ್ಕೂ ಹೆಚ್ಚು ಸಹಕಾರಿಗಳು ರಚನೆಯಾಗಿ ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರ ಹಾಗೂ ಸರಕಾರದ ಮೆಚ್ಚುಗೆಯನ್ನು ಗಳಿಸಿವೆ. ಇ-ಸ್ಟಾಂಪಿಂಗ್‌ನಂತಹ ಸರಕಾರದ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ರೂ 1 ಕೋಟಿಗೂ ಹೆಚ್ಚು ಆದಾಯವನ್ನು ಗಳಿಸಿಕೊಡುವಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಮಹತ್ವದ್ದಾಗಿದೆ. ಸರಕಾರದ ಯಾವುದೇ ಯೋಜನೆಗಳನ್ನು ವಹಿಸಿದರೂ ಸಮರ್ಥವಾಗಿ ನಿರ್ವಹಿಸಬಲ್ಲವು ಎಂಬುದನ್ನು ತೊರಿಸಿಕೊಟ್ಟಿವೆ.

ಈ ಹಿನ್ನೆಲೆಯಲ್ಲಿ ಕೆಲವೆ ಕೆಲವು ಸಹಕಾರಿಗಳ/ಅಧಿಕಾರಿಗಳ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳಿಗೆ ಕಿವಿಗೊಡದೆ ವಾಸ್ತವಿಕತೆಯನ್ನು ಪೂರ್ಣ ಅಧ್ಯಯನಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗುವ ತಿದ್ದುಪಡಿಗಳನ್ನು ಮಾಡಲು ಕ್ರಮವಿಡಬೇಕು. ಸಹಕಾರ ಕ್ಷೇತ್ರದ ಬೆಳವಣಿಗೆಗಾಗಿ ಸಹಕಾರಿಗಳಿಗೆ ಹೆಚ್ಚಿನ ಸ್ವಾಯತ್ತತೆ ಅಗತ್ಯ ಎನ್ನುವ ತತ್ವಕ್ಕೆ ಮಾನ್ಯತೆ ನೀಡುವುದರಜೊತೆಗೆ ಸರಕಾರದ ಘನತೆ ಹೆಚ್ಚಿಸುವ ಕ್ರಮ ಇದಾಗಿದೆ ಎಂಬುದನ್ನು ಗಮನಿಸಬೇಕು. ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಲ್ಲಿರುವ ದೇಶದ 9 ರಾಜ್ಯಗಳಲ್ಲಿ ಕರ್ನಾಟಕಕ್ಕೆ ಪ್ರಥಮ ಹಾಗೂ ಮಾದರಿ ಸ್ಥಾನ ಉಳಿಸಿಕೊಳ್ಳುವ ಪ್ರಯತ್ನವೆಂತಲೂ ಭಾವಿಸಬಹುದಾಗಿದೆ.

**ಎಸ್.ಆರ್.ಸತೀಶಚಂದ್ರ**
ಅಧ್ಯಕ್ಷರು.

ಉತ್ತಮವಾಗಿ ನಡೆಸಿಕೊಂಡು ಹೋಗಬಲ್ಲರು. ಇದರಿಂದ ನಿರ್ದೇಶಕರಿಗೆ ಹೆಚ್ಚಿನ ಜವಾಬ್ದಾರಿ, ಆಡಳಿತ ತಲೆನೋವು ಇರುವುದಿಲ್ಲ.

8) ಸಹಕಾರಿಯ ತನ್ನ ಠೇವುಗಳ ಮೇಲೆ 20 ಪ್ರತಿಶತದಷ್ಟು ಹಣದ ಅಲ್ಪಭಾಗವನ್ನು ನಗದು ರೂಪದಲ್ಲಿ ಹಾಗೂ ಸಹಕಾರಿ ಬ್ಯಾಂಕು, ವಾಣಿಜ್ಯ ಬ್ಯಾಂಕುಗಳ ಚಾಲ್ತಿ ಹಾಗೂ ಉಳಿತಾಯ ಖಾತೆಗಳಲ್ಲಿ ಹಾಗೂ ಬಹುಭಾಗವನ್ನು ಸದರಿ ಬ್ಯಾಂಕುಗಳ ಮುದ್ದತ್ತಿ ಠೇವುಗಳಲ್ಲಿ, ಕಾಲ್ ಡೆಪಾಜಿಟಗಳಲ್ಲಿ ಅಲ್ಲದೇ ಸರ್ಕಾರಿ ಮತ್ತು ಟ್ರಸ್ಟಿ ಭದ್ರತೆಗಳಲ್ಲಿ ಜಮೆ ಇಟ್ಟು ಸಂಯುಕ್ತ ಸಹಕಾರಿಯ ದ್ರವ್ಯಾಸ್ಥಿ ನಿರ್ವಹಣಾ ಪರಿಪತ್ರದ ನಿಯಮಗಳನ್ನು ತಪ್ಪದೇ ಪಾಲಿಸಬೇಕು. ಈ ಹಣವನ್ನು ಯಾವುದೇ ಕಾಲಕ್ಕೆ ಸಾಲ ಮಂಜೂರಿಗಾಗಿ ಉಪಯೋಗಿಸಬಾರದು.

9) ಸಹಕಾರಿಯು ಠೇವು ಹಣದ 80 ಪ್ರತಿಶತಕ್ಕೆ ಶೇರು ಬಂಡವಾಳದ ಹಾಗೂ ಕಾಯ್ದಿಟ್ಟ ನಿಧಿಯ ಸರಿಸಮಾನ ಹಣವನ್ನು ಕೂಡಿಸಿಕೊಂಡು ಆಗುವ ಒಟ್ಟು ಹಣವನ್ನು ತನ್ನ ಸದಸ್ಯರಿಗೆ ಕೊಡುವ ಸಾಲ ವ್ಯವಹಾರದಲ್ಲಿ ಹಾಗೂ ಇತರ ದೈನಂದಿಕ ವ್ಯವಹಾರಗಳಲ್ಲಿ ವಿನಿಯೋಗಿಸುವ ಅಧಿಕಾರ ಹೊಂದಿರುತ್ತದೆ. ಸಾಲ ಕೊಡುವಾಗ ಒಟ್ಟು ಸಾಲ ಕೊಡುವ ಹಣದಲ್ಲಿ 30 ಪ್ರತಿಶತಕ್ಕೆ ಮಿಕ್ಕದಂತೆ ಮಾತ್ರ ಜಾಮೀನು ಸಾಲಗಳಿಗೆ ಉಪಯೋಗಿಸಬಹುದು ಉಳಿದ ಹಣವನ್ನು ಭದ್ರತೆ ಸಾಲಗಳಿಗೆ ಹಾಗೂ ಇತರ ವ್ಯವಹಾರಗಳಿಗೆ ಉಪಯೋಗಿಸಬೇಕು.

10) ಸಹಕಾರಿಯು ತಾನು ಹೊಂದಿದ ಠೇವುಗಳ ವಿಷಯದಲ್ಲಿ ಠೇವುಗಳು ಮರುಪಾವತಿಯ ರಜಿಸ್ಟರವನ್ನು ಹೊಂದಿ ಪ್ರತಿ ತಿಂಗಳು ತಾನು ಸ್ವೀಕರಿಸಿದ ಠೇವುಗಳ ಷರತ್ತುಗಳ ಪ್ರಕಾರ ಕೊಡಬೇಕಾದ ಠೇವು ರಕ್ಕಮುಗಳ ಬಗ್ಗೆ ವಿವರಗಳನ್ನು ಕನಿಷ್ಠ 15 ದಿವಸಗಳ ಮುಂಚೆ ತಿಳಿದುಕೊಳ್ಳಬೇಕು. ಈ ವಿಷಯವನ್ನು ವ್ಯವಸ್ಥಾಪಕರು ನಿರ್ದೇಶಕ ಮಂಡಳಿಯ ನಿದರ್ಶನಕ್ಕೆ ತರಬೇಕು ಹಾಗೂ ಅಂತಹ ಠೇವುಗಳು ಹಾಗೂ ಉಳಿದ ಬಡ್ಡಿ ಹಣ ಸಮೇತ ಆಯಾ ದಿನಾಂಕಿಗೆ ಮರುಪಾವತಿಯ ವ್ಯವಸ್ಥೆಯನ್ನು ಚಾಚು ತಪ್ಪದೇ ಮಾಡಬೇಕು.

11) ಸೌಹಾರ್ದ ಸಹಕಾರಿಯ ಮುಖ್ಯ ಉದ್ದೇಶವು ತಾನು ಹೊಂದಿದ ಎಲ್ಲ ಸದಸ್ಯರು ತಮ್ಮ ಎಲ್ಲ ವ್ಯವಹಾರಗಳನ್ನು ಅಂದರೆ ಠೇವು ವ್ಯವಹಾರಗಳಾಗಲಿ ಅಥವಾ ಸಾಲ ವ್ಯವಹಾರಗಳಾಗಲಿ ಸಹಕಾರಿಯಲ್ಲಿ ಮಾಡಬೇಕು ಎಂಬುದು ಇರುವುದು. ಸೌಹಾರ್ದ ಕಾಯ್ದೆಯ ಪ್ರಕಾರ ಉಪವಿಧಿಗಳಲ್ಲಿ ನಮೂದಿಸಿದಂತೆ ಕನಿಷ್ಠ ವ್ಯವಹಾರಗಳನ್ನು ಮಾಡಬೇಕಾಗುತ್ತದೆ. ಈ ದೃಷ್ಠಿಯಿಂದ ವ್ಯವಹಾರಗಳನ್ನು ಸಹಕಾರಿಯಲ್ಲಿ ಮಾಡಲು ಶಕ್ಯವಿದ್ದ ಜನರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಅವರಿಂದ ಶಕ್ಯಾನುಸಾರ ಶೇರು ಬಂಡವಾಳ, ಠೇವುಗಳನ್ನು ಪಡೆಯಬೇಕು ಸದಸ್ಯರಿಗೆ ಉಪವಿಧಿಗಳ ಪ್ರಕಾರ ಅಲ್ಲದೇ ಅವರ ಅರ್ಹತೆ, ಉದ್ದೇಶ, ಆರ್ಥಿಕ ಸಾಮರ್ಥ್ಯದ ಪ್ರಕಾರ ಅವರವರ ಸಾಲ ಬೇಡಿಕೆಗಳನ್ನು ಅರಿತುಕೊಂಡು ಅವರಿಗೆ ಸೂಕ್ತವಾದ ಸಾಲ ತುಂಬುವ ಕರಾರುಗಳೊಂದಿಗೆ ಸಾಲಗಳನ್ನು ಮಂಜೂರಿ ಮಾಡಬೇಕು. ಅವರಿಂದ ಅವಶ್ಯಕ/ಭದ್ರತೆ/ಜಾಮೀನುಗಳ ಕಾಗದಪತ್ರಗಳನ್ನು ಸರಿಯಾದ ವೇಳೆಗೆ ಪಡೆದು ಸಾಲಗಳನ್ನು ಬಿಡುಗಡೆ ಮಾಡಬೇಕು. ಸಾಲ ಬಿಡುಗಡೆ ವೇಳೆಗೆ ಸದಸ್ಯರಿಗೆ ಸಾಲ ಪತ್ರ ಸಾಲ ಮರುಪಾವತಿ ಕರಾರುಗಳ ಬಗ್ಗೆ, ಬಡ್ಡಿದರ ಹಾಗೂ ಸಾಲದ ಅವಧಿಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಕೊಡಬೇಕು. ಅಂದರೆ ಸಾಲ ವ್ಯವಹಾರಗಳು ಹಾಗೂ ಸಾಲ ಮರುಪಾವತಿಗಳು ಸುರುಳಿತವಾಗಿ ಜರುಗಲು ಸಾಧ್ಯವಾಗುವುದು.

12) ಉಪನಿಯಮಗಳ ಪ್ರಕಾರ ಹಾಗೂ ಕೆಲಸದ ಒತ್ತಡದ ಮೇರೆಗೆ, ಗ್ರಾಹಕರಿಗೆ ಸರಿಯಾದ ವೇಳೆಯಲ್ಲಿ ಸಾಲಗಳ ಮಂಜೂರಿ ಹಾಗು ಇತರ ಸೇವೆಗಳನ್ನು ಒದಗಿಸಲು ನಿರ್ದೇಶಕರು ತಮ್ಮ ಅನಾನೂಕುಲತೆಗಳನ್ನು ಬದಿಗಿಟ್ಟು ಸಹಕಾರಿಯ ಸಭೆಗಳನ್ನು ಮೇಲಿಂದ ಮೇಲೆ ಅವಶ್ಯಕತೆ ಅನುಸಾರ ಜರುಗಿಸಬೇಕು ಕಾನೂನು ಮತ್ತು ನಿಯಮಗಳ ಕಕ್ಷೆಗಳ ಒಳಗೆ ಸದಸ್ಯರಿಗೆ ಅವರ ಸುಖ ದುಃಖಗಳಿಗೆ ಸ್ಪಂದಿಸುವ ನಿರ್ಣಯಗಳನ್ನು ಕೈಕೊಂಡು ಅವುಗಳನ್ನು ಸರಿಯಾದ ವೇಳೆಯಲ್ಲಿ, ಸರಿಯಾದ ಪದ್ಧತಿಯಲ್ಲಿ, ಸರಿಯಾಗಿ ಅಮಲು ಬಜಾವಣೆ ಮಾಡಬೇಕು.

13) ನಿರ್ದೇಶಕ ಮಂಡಳಿಯ ಸಂಸ್ಥೆಯ ಸದಸ್ಯರ ಏಳ್ಗೆಗಾಗಿ ಹಾಗೂ ಸಂಸ್ಥೆಯ ವ್ಯವಹಾರಗಳ ಬೆಳವಣಿಗೆಗಾಗಿ ಸದಾ ಶ್ರಮಿಸಬೇಕು. ತಾವು ಆದಷ್ಟು ಮಟ್ಟಿಗೆ ಸಂಸ್ಥೆಯಿಂದ ಕಡಿಮೆ ಪ್ರಮಾಣದಲ್ಲಿ ಸಾಲ ಸೌಲಭ್ಯಗಳನ್ನು, ಪ್ರಯೋಜನಗಳನ್ನು ಪಡೆಯಬೇಕು. ತಮ್ಮ ವ್ಯವಹಾರಗಳು ಸಂಸ್ಥೆಯಲ್ಲಿ ಪಾರದರ್ಶಕವಾಗಿರಬೇಕು ಹಾಗೂ ಸದಸ್ಯರಿಗೆ ಮಾದರಿಯ ಹಾಗೂ ಅನುಕರಣೀಯವಾಗಿರಬೇಕು. ಅಂದರೆ ನಿರ್ದೇಶಕರು ಸದಸ್ಯರ ಹಾಗೂ ಸಾರ್ವಜನಿಕರ ವಿಶ್ವಾಸ ಮತ್ತು ಶ್ರದ್ಧೆಗೆ ಪಾತ್ರರಾಗುತ್ತಾರೆ. ನಿರ್ದೇಶಕರು ತಮ್ಮ ಸಂಬಂಧಿಕರ ವ್ಯವಹಾರದಲ್ಲಿಯೂ ಸಹ ಅಷ್ಟೇ ಜಾಗರೂಕರಾಗಿರಬೇಕು ಹಾಗೂ ಮೇಲೆ ಬರೆದ ತತ್ವಗಳನ್ನು ಪಾಲಿಸಬೇಕು.

14) ವ್ಯವಸ್ಥಾಪಕರು ಹಾಗೂ ಇತರ ನೌಕರರು ಕಛೇರಿಯಲ್ಲಿ ಸದಸ್ಯರನ್ನು, ಠೇವುದಾರರನ್ನು ಹಾಗೂ ಸಾಲ ಪಡೆದವರನ್ನು ಆತ್ಮೀಯತೆಯಿಂದ ಕಾಣಬೇಕು. ಅವರಿಗೆ ಕಾನೂನು ಕಕ್ಷೆಯಲ್ಲಿ ಗ್ರಾಹಕರು ಕಛೇರಿಯಲ್ಲಿ ಬಂದ ತಕ್ಷಣ ಅವರಿಗೆ ಅವಶ್ಯವಿದ್ದ ಸೇವೆಯನ್ನು ಗುರುತಿಸಿಕೂಂಡು ಅದನ್ನು ಅಲ್ಹಾದಕರವಾಗಿ ಹಾಗೂ ತ್ವರಿತವಾಗಿ ಸರಿಯಾಗಿ ಕೊಡಬೇಕು. ತಮ್ಮ ಸೇವೆಯಿಂದ ಅವರು ತಮ್ಮ ವ್ಯವಹಾರಗಳನ್ನು ಸಹಕಾರಿಯಲ್ಲಿ ಅಚ್ಚುಕಟ್ಟಾಗಿ ಯಾವುದೇ ತೊಂದರೆಯಿಲ್ಲದೇ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಗ್ರಾಹಕರ ವ್ಯವಹಾರಗಳು ಸಹಕಾರಿಯಲ್ಲಿ ಇಮ್ಮಡಿಯಾಗುವದರಲ್ಲಿ ಸಂದೇಹವಿಲ್ಲ. ಇದರಿಂದ ಸಂಸ್ಥೆಯ ಹಾಗೂ ಎಲ್ಲ ಸದಸ್ಯರು ಹಾಗೂ ಠೇವುದಾರರ ಸಂಬಂಧಗಳು ಉತ್ತಮವಾಗಿ ಬೆಳೆಯುತ್ತವೆ.

15) ಸಹಕಾರಿಗಳು ಸಾಲ ಕೊಡುವಾಗ ಸಾಲ ಪಡೆಯುವವರ ಆರ್ಥಿಕ ಸ್ಥಿತಿಗತಿ ಹಾಗೂ ಹಣ ತುಂಬುವ ಸಾಮರ್ಥ್ಯವನ್ನು ತಿಳಿದುಕೊಂಡು ಸಾಲ ಮಂಜೂರಿ ಮಾಡಬೇಕು ಹಾಗೂ ಮರುಪಾವತಿ ಅವಧಿಯನ್ನು ಹಾಗೂ ಕಂತುಗಳನ್ನು ಶಾಸ್ತ್ರೋಕ್ತವಾಗಿ ನಿರ್ಧರಿಸಬೇಕು. ಇವುಗಳಲ್ಲಿ ವ್ಯತ್ಯಾಸವಾದಲ್ಲಿ ಸಾಲಗಳು ಸುಸ್ಥಿ ಬಾಕಿಯಾಗುತ್ತವೆ. ಸಾಲ ಮಂಜೂರಿ ಮಾಡುವಾಗ ಸಾಲಗಾರರು ಮಾಡುವ ಉದ್ಯೋಗ, ಸಾಲ ಪಡೆಯುವ ಉದ್ದೇಶ, ಸಾಲದ ವಿನಿಯೋಗ, ಸಾಲಗಾರನ ಹಣಕಾಸಿನ ಪರಿಸ್ಥಿತಿ ಹಾಗೂ ಸಾಲ ತುಂಬುವ ಸಾಮರ್ಥ್ಯದ ಜೊತೆಗೆ ಅವರ ವ್ಯವಹಾರ ಪದ್ಧತಿ, ನಡತೆ, ಸ್ವಭಾವಗಳನ್ನು ಪರಿಶೀಲಿಸಬೇಕು. ಹೀಗೆ ಮಾಡಿದಲ್ಲಿ ಸಾಲ ತುಂಬುವ ಸಾಮರ್ಥ್ಯವಿದ್ದವರಿಗೆ ಸಾಲ ಮಂಜೂರಿ ಮಾಡಿದಲ್ಲಿ ಸಾಲ ವಸೂಲಿಗೆ ತೊಂದರೆಯಾಗುವದಿಲ್ಲ.

16) ಸಹಕಾರಿಯ ನೌಕರರಲ್ಲಿ ಬಂಧು ಬಾಂಧತ್ವ ಸಂಬಂಧ ಬೆಳೆಯಬೇಕು. ಸಹಕಾರಿಯ ಅಭಿವೃದ್ಧಿಗಾಗಿ ಎಲ್ಲ ನೌಕರರು ಸಾಮೂಹಿಕವಾಗಿ ಶ್ರಮಿಸಬೇಕು. ನೌಕರರ ಸಾಮರ್ಥ್ಯ, ಬುದ್ಧಿವಂತಿಕೆ, ಕೆಲಸ ಮಾಡುವ ಶಕ್ತಿ ಹಾಗೂ ಯುಕ್ತಿ, ಶಿಕ್ಷಣ, ಅನುಭವ, ಕಾರ್ಯತತ್ಪರತೆ, ಸಹಕಾರಿ ವ್ಯವಹಾರ ಬೆಳೆಸುವ ದೃಷ್ಠಿಯಿಂದ ನೌಕರನು ಹೊಂದಿದ ಸಾಮಾಜಿಕ ಸಂಪರ್ಕಗಳನ್ನು ಪರಿಶೀಲಿಸಿ ಸಹಕಾರಿ ಅಭಿವ್ರದ್ಧಿಯ ದೃಷ್ಠಿಯಿಂದ ಅಂಥವರಿಗೆ ಬಡತಿ (Promotion) ಯನ್ನು ಹೆಚ್ಚಿನ ಜವಾಬ್ದಾರಿಯೊಂದಿಗೆ ಕೊಡಬೇಕು. ಹೆಚ್ಚಿನ ಇನಕ್ರಿಮೆಂಟನ್ನು ಸಹ ಕೊಡಬೇಕು. ಎಲ್ಲ ನೌಕರರಿಗೆ ಹೆಚ್ಚು ಕೆಲಸ ಮಾಡಲು ಪ್ರೋತ್ಸಾಹಿಸಿ ಅವರಿಗೆ ಎಲ್ಲರೊ ಸಾಮೂಹಿಕವಾಗಿ ಅತೀ ಉತ್ತಮ ಪ್ರಗತಿ ಮಾಡಿದಲ್ಲಿ ಇನ್ಸೆಂಟಿವವನ್ನು ಬೋನಸ ಜೊತೆಗೆ ಕೂಡಿಸಿ ಕೊಡಬೇಕು. ನೌಕರಿಗಾಗಿ ಸೇವಾ ನಿಯಮಗಳನ್ನು, ಪ್ರಾವಿಡೆಂಟ ಫಂಡ, ಗ್ರ್ಯಾಚುಟಿ ನಿಯಮಗಳನ್ನು ಹಾಗೂ ರಜೆಯ ನಿಯಮಗಳನ್ನು ರಚಿಸಿ ಅವರಿಗೆ ಅನ್ವಯಿಸಬೇಕು. ಹೆಚ್ಚಿಗೆ ಸೇವೆ ಸಲ್ಲಿಸಿದ, ಕಾಯಮ ಸೇವೆಯಲ್ಲಿದ್ದ, ಉತ್ತಮ ಹಾಗೂ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಡಿಮೆ ಬಡ್ಡಿ ದರದಲ್ಲಿ ನೌಕರರ ಹುದ್ದೆ, ಪಗಾರ ಹಾಗೂ ಉಳಿದ ಸೇವಾವಧಿ ಅನುಸಾರ ಅಲ್ಲದೆ ಅವರ ಆವಶ್ಯಕತೆಗಳನ್ನು ತಿಳಿದು ಮಿತಿಯೊಳಗೆ ಸುಲಭ ಕರಾರುಗಳುಳ್ಳ ಸಾಲ ಸೌಲಭ್ಯಗಳನ್ನು ಸಹಕಾರಿಯು ಅಂತಹವರಿಗೆ ಒದಗಿಸಬೇಕು.

17) ಸಹಕಾರಿಯು ನೌಕರರ ಸಾಮರ್ಥ್ಯ, ಶಿಕ್ಷಣ ಹಾಗೂ ಜಾಣತನದ ಅನುಗುಣವಾಗಿ ಅವರಿಗೆ ಅವರು ನಿರ್ವಹಿಸುವ ಕೆಲಸವನ್ನು ಅವರಿಗೆ ಕೊಡಬೇಕು. ಪ್ರತಿ ನೌಕರರ ಕೆಲಸಗಳನ್ನು (ಮ್ಯಾನೇಜರ ಹಾಗೂ ಆಫೀಸರರನ್ನು ಹೊರತುಪಡಿಸಿ) ಕನಿಷ್ಠ ಒಂದು ವರ್ಷಕ್ಕಾದರೂ ಅವರೊಳಗೆ ಬದಲಾವಣೆ ಮಾಡಬೇಕು. (Rotation of Work among the Staff) ಪ್ರತಿಯೊಬ್ಬ ನೌಕರರಿಗೆ ದಿನಾಲು ಮುಂಜಾನೆ ಒದಗಿಸಿದ ಕೆಲಸ ಏನು? ಹಾಗೂ ಎಷ್ಟು? ಆದರೆ ಸಂಜೆಯ ವೇಳೆಯವರೆಗೆ ಅವರು ಮಾಡಿದ್ದು ಏನು? ಹಾಗೂ ಎಷ್ಟು ಎಂಬುದನ್ನು ಸಹಕಾರಿಯು ಪರೀಕ್ಷಿಸಬೇಕು.

18) ಈಗ ಸಾಲ ಪಡೆಯುವ ಜನರಿಗಿಂತಾ ಸಾಲ ಒದಗಿಸುವ ಸಂಸ್ಥೆಗಳು, ಎಜೆನ್ಸಿಗಳು ಬಹಳವಿದ್ದು ಈ ಹೊತ್ತಿನದು ಸಾಲ/ಸೇವೆ ಖರೀದಿಸುವವರ ಮಾರುಕಟ್ಟೆ (Buyers Market) ಇದೆ. ಸಾಲ ಕೊಡುವವರು ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಿ ಸಾಲ ಕೊಡುತ್ತಿರುವರು. ಸಾಲ ವ್ಯವಹಾರಗಳಲ್ಲಿ ಕನಿಷ್ಠ ಕರಾರುಗಳು, ಕನಿಷ್ಠ ಸಹಿ ಮಾಡುವ ಕಾಗದಪತ್ರಗಳು, ಕನಿಷ್ಠ ಬಡ್ಡಿದರ ಹಾಗೂ ಇತರ ಅನೇಕ ಸೇವಾ ಸವಲತ್ತುಗಳು (ಅಂದರೆ ಸಾಲ ಅರ್ಜಿಗಳ ಛಾನನಿಗೆ ತೆಗೆದುಕೊಳ್ಳುವ ವೇಳೆ, ಪಡೆಯುವ ಮಾಹಿತಿ, ಸಾಲ ಮಂಜೂರಿಯ ವೇಳೆ ಹಾಗೂ ಮಂಜೂರಿ ನಂತರ ಬಿಡುಗಡೆಗೆ ತೆಗೆದುಕೊಳ್ಳುವ ಸಮಯ, ಕೆಲಸದ ವೇಳೆಗಳು) ಮುಖ್ಯವಾಗಿವೆ. ಇವುಗಳು ಎಷ್ಟು ಉತ್ತಮ ಮತ್ತು ಅನುಕೂಲಕರವಾಗುತ್ತವೆ ಅಷ್ಟು ಜನರನ್ನು ಆಕರ್ಷಿಸುತ್ತವೆ. ಒಂದು ವೇಳೆ ಬಡ್ಡಿದರದಲ್ಲಿ ಸ್ವಲ್ಪ ಹೆಚ್ಚಿಗೆ ಇದ್ದರೂ ಉಳಿದ ಎಲ್ಲ ಸಾಲ ಸೌಲಭ್ಯಗಳು ಚೆನ್ನಾಗಿದ್ದಲ್ಲಿ ಹಾಗೂ ಆಕರ್ಷಕವಿದ್ದಲ್ಲಿ ಗ್ರಾಹಕರು ಸ್ವಲ್ಪ ಹೆಚ್ಚಿನ ಬಡ್ಡಿದರ ಕೊಡಲು ಹಿಂಜರಿಯುವುದಿಲ್ಲ.

ಮುಂದಿನ ಸಂಚಿಕೆಗೆ...



# ಸೌಹಾರ್ದ ಸಹಕಾರಿಯು ಹೇಗೆ ಸುಂದರ ಹಾಗೂ ಸದೃಢವಾಗಿ ಬೆಳೆಯಬಲ್ಲುದು?

ಜಿ. ಎಸ್. ಟೋಪಣ್ಣವರ
ವಿಭಾಗೀಯ ಅಧಿಕಾರಿ, ಬೆಳಗಾವಿ.

**ಸಹಕಾರಿಗಳು ಠೇವುಗಳ ಮೇಲೆ ಬಡ್ಡಿ ದರ ನಿಗದಿಪಡಿಸುವಾಗ ಸ್ಥಾನಿಕ ಬ್ಯಾಂಕುಗಳ ಬಡ್ಡಿ ದರಗಳನ್ನು ಹಾಗೂ ಸಹಕಾರಿ ಸಂಘ, ಸೌಹಾರ್ದ ಸಹಕಾರಿಗಳು ಠೇವುಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.**

ಸಹಕಾರಿಯು ಈ ಕೆಳಗಿನ ಕೆಲವು ಮುಖ್ಯಾಂಶಗಳನ್ನು ಹೊಂದಿದ್ದರೆ ಅದು ಸುಂದರವಾಗಿ ಹಾಗೂ ಸದೃಢವಾಗಿ ಬೆಳೆಯಬಲ್ಲದು ಹಾಗೂ ಅದರಿಂದ ಸಮಾಜಕ್ಕೆ ಅವಶ್ಯಕ ಮತ್ತು ಉಪಯುಕ್ತ ಸೇವೆ ಒದಗಬಲ್ಲದು.

1) ಸಹಕಾರಿ ಆಡಳಿತ ಮಂಡಳಿಯಲ್ಲಿ ಸಮಾಜದಲ್ಲಿ ಘನತೆ ಗೌರವವುಳ್ಳ ಉತ್ತಮ ನಾಯಕತ್ವವುಳ್ಳ ಮತ್ತು ಉತ್ತಮ ಚಾರಿತ್ರ್ಯವುಳ್ಳ ನಿಸ್ವಾರ್ಥ ಮನೋಭಾವನೆ, ಸಹಕಾರಿಯ ಸದಸ್ಯರು ಇರುವುದು ಸಹಕಾರಿಯ ಹಿತ ದೃಷ್ಠಿಯಿಂದ ಉತ್ತಮ. ಎಲ್ಲ ಅಂತವರು ಇರಲಿಕ್ಕೆ ಶಕ್ಯವಾಗದಿದ್ದರೂ ಕೆಲವು ಸದಸ್ಯರಾದರೂ ಇರುವುದು ಸೂಕ್ತ, ಅಂತಹ ಜನರ ಕೈಯಲ್ಲಿ ಅಧಿಕಾರ ಚುಕ್ಕಾಣಿ ಇದ್ದರೆ ಸಹಕಾರಿ ಅಭಿವೃದ್ದಿಯೂ ತೀವ್ರ ಗತಿಯಲ್ಲಿ ಜರಗಲು ಸಾಧ್ಯವಾಗುವದು ಎಂದು ಊಹಿಸಬಹುದಾಗಿದೆ.

2) ಪ್ರಜಾಪ್ರಭುತ್ವದಲ್ಲಿ ಬಹುಮತದಿಂದ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಪದ್ದತಿ ಇದ್ದು ಹೀಗೆ ಆಯ್ಕೆ ಆದವರು ಸಂಸ್ಥೆಯ ಉಚ್ಚ ಸ್ಥಾನ್ನದಲ್ಲಿ ತಮಗೆ ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ದೇಶಕ ಮಂಡಳಿಯ ಎಲ್ಲ ಸದಸ್ಯರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಬಹಳಷ್ಟು ಕಾಳಜಿಯಿಂದ ಉತ್ತಮವಾಗಿ ನಿರ್ವಹಿಸಬೇಕಾಗುತ್ತದೆ. ಹೀಗೆ ಆಯ್ಕೆ ಅದವರು ತಮ್ಮ ಜೀವನದಲ್ಲಿಯ ಬಹಳಷ್ಟು ವೇಳೆಯನ್ನು ಸಂಸ್ಥೆಯ ಕೆಲಸಕ್ಕೆ, ಬೆಳವಣಿಗೆಗೆ ವ್ಯಯ ಮಾಡಬೇಕು. ಸಹಕಾರಿಯ ದೈನಂದಿಕ ಕಾರ್ಯಗಳನ್ನು ನಿಸ್ವಾರ್ಥದಿಂದ ಮಾಡಬೇಕು ಹಾಗೂ ಹಗಲಿರಳು ಸಹಕಾರಿಯ ಅಭಿವೃದ್ದಿಗಾಗಿ ಚಿಂತಿಸಬೇಕಾಗುತ್ತದೆ. ಅದಲ್ಲದೆ ಅದರ ಏಳ್ಗೆಗಾಗಿ ಮುಂಧೋರಣೆಯ ಸಕ್ರಿಯ ಆಲೋಚಣೆಗಳನ್ನು ಮಾಡಬೇಕು. ಸಹಕಾರಿ ಅಧ್ಯಕ್ಷರು ಕಾಯ್ದೆ, ಕಾನೂನು ಪರಿಪತ್ರಗಳ ಮಿತಿಯೊಳಗೆ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಗ್ರಾಹಕರ, ಸದಸ್ಯರ ಯಾವುದೇ ವ್ಯವಹಾರಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲ ನಿರ್ದೇಶಕ ಮಂಡಳಿಯ ಸದಸ್ಯರೊಂದಿಗೆ ಸುಧೀರ್ಘವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಕೊಳ್ಳಬೇಕಾಗುತ್ತದೆ. ಹೀಗೆ ಕೈಕೊಂಡ ಯಾವುದೇ ನಿರ್ಣಯವು ಕಾನೂನು ಹಾಗೂ ಉಪ ನಿಭಂದನೆಗಳ ವ್ಯತಿರಿಕ್ತ ಹಾಗೂ ಸಹಕಾರಿಗೆ ಹಾಗೂ ಗ್ರಾಹಕರಿಗೆ ಅಹಿತಕರವಾಗಿರಕೊಡದು ಅಂತಹ ಯಾವುದೆ ನಿರ್ಣಯಗಳು ಸರ್ವಸಾಮಾನ್ಯವಾಗಿ ಸಮಾಜ ದೃಷ್ಟಿಯಲ್ಲಿ ಸಾರ್ವಜನಿಕರ ಟೀಕೆ ಟಿಪ್ಪಣೆಗಳಿಗೆ ಆಸ್ಪದ ಕೊಡದಂತೆ ಸಹಕಾರಿಯ ನಿರ್ದೇಶಕ ಮಂಡಳಿಯು ಕಾರ್ಯನಿರ್ವಹಿಸಬೇಕು.



3) ಸಹಕಾರಿಯು ಊರಲ್ಲಿಯ ಆಯಕಟ್ಟಿನ ಸದಸ್ಯರ ವ್ಯವಹಾರಕ್ಕೆ ಅನುಕೂಲವಾಗುವ ಹಾಗೇ ಉತ್ತಮ ರಹದಾರಿಗಳ, ಪಾರ್ಕಿಂಗ ವ್ಯವಸ್ಥೆಯುಳ್ಳ ಸಂಸ್ಥೆಯ ಕಾರ್ಯಕ್ಕೆ ಅನುಕೂಲವಾಗುವಂತಹ ಸ್ಥಳದಲ್ಲಿರುವ ಭದ್ರ ಇಮಾರತಿಯಲ್ಲಿ ತನ್ನ ಕಛೇರಿಯನ್ನು ಹೊಂದಬೇಕು ಕಛೇರಿಯಲ್ಲಿ ವ್ಯವಹಾರಕ್ಕೆ ಕೌಂಟರ ಹಾಕಲು ಗ್ರಾಹಕರಿಗೆ ಕುಳಿತುಕೊಳ್ಳಲು, ಸಭೆಗಳನ್ನು ಜರುಗಿಸಲು ನಗದು ಹಣ ಮತ್ತು ಬೆಲೆಯುಳ್ಳ ವಸ್ತುಗಳನ್ನು, ಸ್ಟೇಶನರಿ ಹಾಗೂ ರಿಕಾರ್ಡಗಳನ್ನು ಇಡಲು ಎಲ್ಲ ವ್ಯವಸ್ಥೆಗಳನ್ನು ಮಾಡಲು ಅನುಕೂಲತೆ ಇರಬೇಕು. ಕಛೇರಿಗೆ ಸಹಕಾರಿ ಹೆಸರಿನಲ್ಲಿ ಸುಂದರವಾಗಿ ಬರೆದ ಫಲಕವನ್ನು ಮುಂಭಾಗದಲ್ಲಿ ಹಾಕಬೇಕು. ಪ್ರತಿ 2–3 ವರ್ಷಕ್ಕೊಮ್ಮೆ, ಒಂದು ವೇಳೆ ಮೊದಲೆ ನಸಿಸಿದರೆ ಅದನ್ನು ಮತ್ತೆ ಬರಿಸಬೇಕು. ಕಛೇರಿಯಲ್ಲಿ ಕಾರ್ಯ ವೇಳೆಗಳ, ಸಾಲದ ಬಡ್ಡಿ ದರಗಳ, ನಿರ್ದೇಶಕ ಮಂಡಳಿಯ ಹೆಸರುಗಳ, ಸಹಕಾರಿಗಳಲ್ಲಿ ಆಕರ್ಷಿಸುವ ಸೇವಾ ಶುಲ್ಕಗಳ, ಲಾಕರ ಬಾಡಿಗೆಗಳ, ಖಾತೆ ತೆಗೆಯಲು ಅನುಸರಿಸಬೇಕಾದ ವಿಧಿ ವಿಧಾನಗಳ. ಆಡಳಿತ ಮಂಡಳಿಯ ಸಭೆಯ ತಾರೀಖು, ನೋಟಿಸ ಬೋರ್ಡು ಇವೆಲ್ಲ ಫಲಕಗಳನ್ನು ಸ್ಥಾನಿಕ ಭಾಷೆಯಲ್ಲಿ ಗ್ರಾಹಕರು ಓದುವ ಹಾಗೇ ಬರೆಯಿಸಬೇಕು ಓದುವ ಸ್ಥಳದಲ್ಲಿ ಕಛೇರಿಯಲ್ಲಿ ಇರಿಸಬೇಕು. ಗ್ರಾಹಕರ ಸಲಹೆ ಸೂಚನೆ ಹಾಗೂ ತಕ್ರಾರ ಪ್ರತ್ತೇಕ ಪೆಟ್ಟಿಗೆಗಳನ್ನು ಬೀಗ ಹಾಕಿ ಏರಿಸಬೇಕು. ಅಧ್ಯಕ್ಷರು ಎರಡು ಪೆಟ್ಟಿಗೆಗಳನ್ನು ಪ್ರತಿ ತಿಂಗಳು ನಿಗಧಿತ ದಿನಾಂಕಿನಂದು ಬೀಗ ತೆಗೆಯುವ ಮೂಲಕ ಅವುಗಳಲ್ಲಿಯ ಬಂದ ಕಾಗದಗಳನ್ನು ಪರಿಶೀಲಿಸಬೇಕು.

4) ಸಹಕಾರಿಗೆ ಅದರ ವ್ಯವಹಾರಗಳನ್ನು ಸರಿಯಾಗಿ ನಿಭಾಯಿಸಬಲ್ಲ ಅವಶ್ಯಕ ಶಿಕ್ಷಣ ಅರ್ಹತೆಯುಳ್ಳ, ಅನುಭವವುಳ್ಳ, ಉತ್ತಮ ವ್ಯಕ್ತಿತ್ವವಿರುವ, ಮಾತು ಚಾತುರ್ಯವುಳ್ಳ, ಮೃದು ಸ್ವಭಾವದ, ಸಹಕಾರಿ ಮನೋಭಾವನೆಯ, ಉತ್ತಮ ಆಚಾರ ವಿಚಾರವುಳ್ಳ ಸದೃಢ ಕಾಯದ ವ್ಯಕ್ತಿಯನ್ನು ಕಾರ್ಯನಿರ್ವಹಣಾಧಿಕಾರಿ ಎಂದು ನಿಯಮಗಳ ಪ್ರಕಾರ ಸಹಕಾರಿಯು ನೇಮನೂಕಿ ಮಾಡಬೇಕು. ಅವರ ಜೊತೆಗೆ ಇತರ ಅವಶ್ಯಕ ಸಿಬ್ಬಂಧಿಗಳನ್ನು ಈ ಅಂಶಗಳನ್ನು ಹೆಚ್ಚು ಕಡಿಮೆ ಆಧರಿಸಿ ಸಂಸ್ಥೆಯ ಹಿತದೃಷ್ಠಿಯಿಂದ ಉತ್ತಮ ಪದ್ದತಿಯಲ್ಲಿ ನಿಯಮಗಳ ಪ್ರಕಾರ ಅವರವರ ವಿದ್ಯಾರ್ಹತೆ, ಜಾನತಣ, ಚಾತುರ್ಯ ಹಾಗೂ ಪರಿಣತೆ ಸಾಮರ್ಥ್ಯಗಳ ಪ್ರಕಾರ ಸಹಕಾರಿಯ ವಿವಿಧ ಜಾಗೆಗಳಲ್ಲಿ ನೇಮನೂಕಿ ಮಾಡಬೇಕು ಹಾಗೂ ಎಲ್ಲರ ವೇತನಗಳನ್ನು ಉತ್ತಮ ತಿಳುವಳಿಕೆ ಮೇರೆಗೆ ನಿರ್ಧರಿಸಬೇಕು ಮತ್ತು ಕೊಡಬೇಕು. ನೌಕರರಿಗೆ ಸಂಸ್ಥೆಯ ಏಳಿಗೇ ಬಗ್ಗೆ ಹಗಲಿರುಳು ಕಾಳಜಿ ಇರಬೇಕು. ಈ ದೃಷ್ಠಿಯಲ್ಲಿ ಅವು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಸಂಸ್ಥೆಯ ಬೆಳವಣಿಗಗೆ ಶ್ರಮಿಸಬೇಕು ಹಾಗೂ ನಿರ್ದೇಶಕರ ಹಾಗೂ ಗ್ರಾಹಕರ ಪ್ರೀತಿ ವಿಶ್ವಾಸಕ್ಕೆ ಮತ್ತು ಆದರತೆಗೆ ಪಾತ್ರರಾಗಬೇಕು.

5) ಗ್ರಾಹಕರ ವ್ಯವಹಾರದ ಅನುಕೂಲತೆಗಳನ್ನು ಲಕ್ಷಿಸಿ ಹಾಗೂ ಊರಲ್ಲಿಯ ಇತರ ಆರ್ಥಿಕ ಸಂಸ್ಥೆಗಳ ಕೆಲಸದ ದಿವಸಗಳು ಹಾಗೂ ವೇಳೆಗಳನ್ನು ಗಮನದಲ್ಲಿರಿಸಿಕೊಂಡು ಸಹಕಾರಿ ವ್ಯವಹಾರಗಳನ್ನು ಬೆಳೆಸುವ ದೃಷ್ಠಿಯಿಂದ ಯೋಗ್ಯವಾಗಿ ಕೆಲಸದ ದಿವಸಗಳನ್ನು, ಕೆಲಸದ ವೇಳೆಗಳನ್ನು ಹಾಗೂ ಕೆಲಸದ ರಜೆ/ಬಿಡುವುಗಳನ್ನು ನಿರ್ಧರಿಸಬೇಕು.

6) ಆಡಳಿತ ಮಂಡಳಿಯ ಎಲ್ಲ ಸದಸ್ಯರು ಕಾಯ್ದೆ, ನಿಯಮ, ಸಹಕಾರಿ ಉಪನಿಭಂದನೆಗಳು ಹಾಗೂ ವ್ಯವಹಾರದ ಹಾಗೂ ಇತರ ನಿಯಮಗಳನ್ನು ಅಲ್ಲದೇ ಸಂಯುಕ್ತ ಸಹಕಾರಿಯ ಪರಿಪತ್ರಗಳನ್ನು ತಿಳಿದುಕೊಳ್ಳಬೇಕು. ಇವುಗಳ ಬಗ್ಗೆ ಸಹಕಾರಿಯು ತನ್ನ ನೌಕರರು ಸಹ ಅವುಗಳನ್ನು ಚೆನ್ನಾಗಿ ಅಭ್ಯಸಿಸಿ ತಿಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು. ಆಡಳಿತ ಮಂಡಳಿಯ ಸದಸ್ಯರು ಮೇಲಿಂದ ಮೇಲೆ ಸಂಯುಕ್ತ ಸಹಕಾರಿಯು ಜರುಗಿಸುವ ತರಬೇತಿಗಳಿಗೆ ಮತ್ತು ಸಭೆಗಳಿಗೆ ಹಾಜರಾಗಬೇಕು ಹಾಗೂ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಅವುಗಳನ್ನು ಸಹಕಾರಿಯ ದೈನಂದಿನ ವ್ಯವಹಾರದಲ್ಲಿ ಅಳವಡಿಸಿಕೊಳ್ಳಬೇಕು.

7) ನಿರ್ದೇಶಕ ಮಂಡಳಿಯು ಸಂಬಂಧಪಟ್ಟ ಸಭೆ, ತರಬೇತಿಗಳು, ಕಾರ್ಯಕ್ರಮಗಳಿಗೆ ಅವಶ್ಯಕತೆ ಅನುಸಾರ ಸಿಬ್ಬಂಧಿಗಳನ್ನು ಸಂಸ್ಥೆಯ ಖರ್ಚಿನಲ್ಲಿ ಕಳುಹಿಸಬೇಕು. ಅವರಿಗೆ ಎಲ್ಲ ತರಹದ ಪ್ರೋತ್ಸಾಹಗಳನ್ನು, ಬೆಂಬಲವನ್ನು ಕೊಟ್ಟು ಎಲ್ಲ ಸಿಬ್ಬಂಧಿಗಳನ್ನು ಜ್ಞಾನ, ಕಾಯಿದೆ, ನಿಯಮ, ಉಪವಿಧಿ, ಪರಿಪತ್ರಗಳು ಇವುಗಳ ತಿಳುವಳಿಕೆ ಕೊಡಿಸಿ ಅವರನ್ನು ಪರಿಪೂರ್ಣರನ್ನಾಗಿ ಮಾಡಬೇಕು. ಒಳ್ಳೆಯ ಜ್ಞಾನವುಳ್ಳ, ಚಾಣಕ್ಷ ಹಾಗೂ ಉತ್ತಮ ನಡತೆಯುಳ್ಳ, ಶ್ರಮ ಜೀವಿ, ನಂಬಿಗಸ್ತ ನೌಕರರು ಸಹಕಾರಿಯ ಆಸ್ತಿ ಇದ್ದ ಹಾಗೇ. ಇವರು ಸಂಸ್ಥೆಯ ಕಾರ್ಯಭಾರವನ್ನು

# ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ





ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿ,ಧಾರವಾಡ ಇದಕ್ಕೆ ಭೇಟಿನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು ಈ ಸಮಯದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ,ನಿರ್ದೇಶಕ ಶ್ರೀ ರವಿ ಯಲಿಗಾರ ಬೆಳಗಾವಿ ವಿಭಾಗೀಯ ಕಚೇರಿಯ ಅಧಿಕಾರಿ ಶ್ರೀ ಜಿ.ಎಸ್.ಟೋಪಣ್ಣವರ ಹಾಜರಿದ್ದರು. ಸಹಕಾರಿಯ ಅಧ್ಯಕ್ಷ ಶ್ರೀ ಸಿ.ಪಿ.ಪಡಚಣ್ಣವರ ಹಾಗೂ ನಿರ್ದೇಶಕ ಮಂಡಳಿಯವರು ಉಪಸ್ಥಿತರಿದ್ದು ಸಹಕಾರಿಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಮತ್ತು ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸಲಹೆಗಳನ್ನು ಅಳವಡಿಸಿಕೊಳ್ಳಲು ಕ್ರಮವಿಡುವುದಾಗಿ ತಿಳಿಸಿದರು. ಅದೇ ದಿನ ವಿಜಯಲಕ್ಷ್ಮೀ ಅರ್ಬನ್ ಸೌಹಾರ್ದ ಸಹಕಾರಿ ಹಾಗೂ ದೈವಜ್ಞ ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಭೇಟಿನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ ಮುಂಬರುವ ದಿನಗಳಲ್ಲಿ ಈ ಸಹಕಾರಿಗಳು ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡಿದರು.

ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರೂ ಸಹ ವಿಜಯಲಕ್ಷ್ಮಿ ಅರ್ಬನ್ ಸೌಹಾರ್ದ ಸಹಕಾರಿ ಧಾರವಾಡ ಈ ಸಂಸ್ಥೆಗೆ ಭೇಟಿನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

# ನಂದಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಕೇಂದ್ರ ಉದ್ಘಾಟನೆ



ಗ್ರಾಮೀಣಾಭಿವೃದ್ಧಿಯನ್ನು ಮೂಲಮಂತ್ರವನ್ನಾಗಿಟ್ಟು ಕೊಂಡು, ಗ್ರಾಮೀಣ ಯುವಜನತೆಗೆ ಮತ್ತು ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ನೆರವು, ವ್ಯಾಪಾರಸ್ಥರಿಗೆ ಮತ್ತು ಜನಸಾಮಾನ್ಯರಿಗೆ ಸುಲಭ ಷರತ್ತುಗಳ ಹಲವು ರೀತಿಯ ಸಾಲದ ಸೌಲಭ್ಯ ಹಾಗು ಮುಖ್ಯವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಕಂಪ್ಯೂಟರ್ ಸಾಲ ಹಾಗೂ ಇನ್ನಿತರ ಸಮಾಜಕ್ಕೆ ಉಪಯೋಗವಾಗುವಂತ ಮಹತ್ತರ ಯೋಜನಗಳನ್ನಿಟ್ಟುಕೊಂಡು ಚಿಕ್ಕಬಳ್ಳಾಪುರ ನಗರದಲ್ಲಿ ಸ್ಥಾಪಿತವಾದ ನಂದಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತವು ಜುಲೈ 1ರಂದು ಇ–ಸ್ಟಾಂಪಿಂಗ್ ಕೇಂದ್ರ ಉದ್ಘಾಟನೆ ಹಾಗು ಷೇರುದಾರರಿಗೆ ಪತ್ರ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಈ ಸಮಾರಂಭವು ಶ್ರೀ ಸಿದ್ದೇಶ್ವರ ಸ್ವಾಮಿಗಳ ಆಶೀರ್ವಚನದೊಂದಿಗೆ ಆರಂಭಗೊಂಡು ಮಾನ್ಯ ಇಂಧನ ಮತ್ತು ಆಹಾರಖಾತೆ ಸಚಿವರು ಹಾಗು ಚಿಕ್ಕಬಳ್ಳಾಪುರ ಜಿಲ್ಲೆಯ ಉಸ್ತುವಾರಿ ಸಚಿವೆ ಶೋಭಕರಂದ್ಲಾಜೆ ಯವರು ಇ–ಸ್ಟಾಂಪಿಂಗ್ ಕೇಂದ್ರವನ್ನು ಉದ್ಘಾಟಿಸಿದ್ದು ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಸಂಘಟಣಾ ಕಾರ್ಯದರ್ಶಿ ಶ್ರೀ ಎನ್. ರವಿಕುಮಾರ್‌ರವರು, ಜಿ.ಜೆ.ಪಿ. ರಾಜ್ಯ ಉಪಾಧ್ಯಕ್ಷರು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ॥ ಮಂಗಳ ಶ್ರೀಧರ್, ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ., ಕಾರ್ಯ ನಿರ್ವಹಣಾಧಿಕಾರಿ ಶ್ರೀ ಶರಣಗೌಡ ಪಾಟೀಲ್ ಹಾಗೂ ಇನ್ನಿತರ ಗಣ್ಯರು ಭಾಗವಹಿಸಿದ್ದು, ಸಂಸ್ಥೆಯ ಅಧ್ಯಕ್ಷ ಶ್ರೀ ತಮ್ಮೇಶ್ ಗೌಡರವರು ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ವಹಿಸಿದ್ದರು.

## ಶ್ರೀಮಾತಾ ವೈಭವ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯಲ್ಲಿ ಉಚಿತ ಪಠ್ಯಪುಸ್ತಕ ವಿತರಣೆ

ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಶ್ರೀಮಾತಾ ವೈಭವ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ದಶಮಾನೋತ್ಸವ ಅಂಗವಾಗಿ ಹಾದ್ರಿಮನೆ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ ಸಮಾರಂಭವನ್ನು ದಿನಾಂಕ 16/06/2011 ರಂದು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಹಾಲಾ ತಿಮ್ಮಾ ನಾಯ್ಕ ತಿಪ್ಪನಗಕೊಡ್ಲು, ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಟಿ.ಎನ್.ನಾಯಕ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಸನ್ನ ಹೆಗ್ಡೆ,ಶ್ರೀಮತಿ ಕಲಾ ಭಟ್, ಶ್ರೀ ಎಮ್.ಜಿ.ನಾಯಕ, ಶ್ರೀ ದಿವಾಕರ ನಾಯಕ, ಶ್ರೀ ಗಣಪತಿಭಟ್ ಜಾತಕ, ಶ್ರೀಮತಿ ಭುವನೇಶ್ವರಿ ಹೆಗಡೆ,ಶ್ರೀಮತಿ ಉಮಾ ನಾಯಕ, ಶ್ರೀ ಎನ್.ಎಲ್.ಗೌಡ ಹಾಗೂ ಎಸ್.ಡಿ.ಎಮ್.ಸಿ ಯ ಅನೇಕ ಸದಸ್ಯರು ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಸಹಕಾರಿಗಳ ಪರಿಚಯ

ಸಾಮಾಜಿಕ ಕಳಕಳಿಯ ಸಹಕಾರಿ :

ಶ್ರೀಮತಿ ರೇಣುಕಾ ಪರಮೇಶ

ತುಮಕೂರು.

ರಾಜ್ಯದ ಸಹಕಾರ ಕ್ಷೇತ್ರಕ್ಕೆ ತುಮಕೂರು ಜಿಲ್ಲೆಯ ಕೊಡುಗೆ ಅಪಾರ. ಅನೇಕ ಉತ್ತಮ ಸಹಕಾರಿ ಸಂಸ್ಥೆಗಳು ಉತ್ತಮ ಸಹಕಾರಿ ನಾಯಕರು ಈ ಜಿಲ್ಲೆಯಿಂದ ಹೊರಹೊಮ್ಮಿದ್ದಾರೆ. ಅದೇ ರೀತಿ ಸೌಹಾರ್ದ ಸಹಕಾರಿ ಕ್ಷೇತ್ರವೂ ಈ ಜಿಲ್ಲೆಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದೆ. ಅನೇಕ ಉತ್ತಮ ಪ್ರತಿಭಾನ್ವಿತ ಸಹಕಾರಿ ನಾಯಕರಲ್ಲಿ ಶ್ರೀಮತಿ ರೇಣುಕಾ ಪರಮೇಶರವರೂ ಒಬ್ಬರು. ಸಹೃದಯಿಗಳು. ಸಾಮಾಜಿಕ ಸಾಂಸ್ಕೃತಿಕ ಸಹಕಾರಿ ಕ್ಷೇತ್ರ ಹಾಗೂ ಪತ್ರಿಕೋದ್ಯಮ ಕ್ಷೇತ್ರಗಳ ಅನುಭವ ಹಾಗೂ ಹಿನ್ನೆಲೆಯುಳ್ಳವರು.

ತುಮಕೂರಿನ ಖ್ಯಾತ ಉದ್ಯಮಿ ಶ್ರೀ ಕೆ.ವಿ.ಪರಮೇಶ ರವರ ಬಾಳ ಸಂಗಾತಿಯಾಗಿರುವ ಶ್ರೀಮತಿ ರೇಣುಕಾರವರು 1993ರಲ್ಲಿ ಜೇಸಿರೇಟ್ಸ್ ಸಂಸ್ಥೆಯ ಅಧ್ಯಕ್ಷರಾಗಿ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದವರು. ಕುಂದಾಪುರದಲ್ಲಿ ಜರುಗಿದ ಮಹಿಳಾ ಸಮ್ಮೇಳನದ ಅಧ್ಯಕ್ಷರಾಗಿ ಸಮಾರಂಭವನ್ನು ಯಶಸ್ವಿಗೊಳಿಸಿದ ಹೆಗ್ಗಳಿಕೆ ಇವರದು.

ತುಮಕೂರಿನ "ಸ್ಪಂದನ" ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾಗಿ ವುಮೆನ್ ವೆಲ್‌ಫೇರ್ ಅಸೋಸಿಯೇಶನ್ ಕಾರ್ಯದರ್ಶಿಯಾಗಿ ಕರ್ನಾಟಕ ಕರಕುಶಲ ನಿಗಮದ ನಿರ್ದೇಶಕಿಯಾಗಿ ಕರ್ನಾಟಕ ಪಂಚಾಯತ ಪರಿಷತ ಮಹಿಳಾ ವಿಭಾಗದ ಉಪಾಧ್ಯಕ್ಷರಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಿರುವ ಅನುಭವ ಇವರದ್ದಾಗಿದೆ. 2007-08 ತುಮಕೂರು ರೋಟರಿ ಅಧ್ಯಕ್ಷೆಯಾಗಿ ಸಲ್ಲಿಸಿದ ಸೇವೆ ಶ್ಲಾಘನೀಯವಾಗಿದೆ.

ಶ್ರೀಮತಿ ರೇಣುಕಾ ಪರಮೇಶರವರು ಸೇವೆಯೇ ಜೀವನದ ಮುಖ್ಯ ಗುರಿ ಎಂಬ ಅರ್ಪಣಾ ಮನೋಭಾವದಿಂದ ಕೆಲಸ ಮಾಡುವವರು. ಸಹಕಾರಿ ಕ್ಷೇತ್ರದ ಮೂಲಕ ಸಮಾಜದ ಕನಿಷ್ಠ ವ್ಯಕ್ತಿಯ ಸೇವೆ ಮಾಡಲು ಸಾಧ್ಯ ಎಂಬ ಮನವರಿಕೆಯಿಂದ ಶ್ರೀ ಬನಶಂಕರಿ ಸೌಹಾರ್ದ ಪತ್ತಿನ ಸಹಕಾರಿಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿ ಹಾಲಿ ನಿರ್ದೇಶಕಿಯಾಗಿ ಉತ್ತಮ ಮಹಿಳಾ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಪ್ರಾಣಿಗಳಲ್ಲಿ ಸಹಕಾರ ಮನೋಭಾವ ಅನುಕರಣೀಯ



ಇತ್ತೀಚೆಗೆ ನಡೆದ ಹಾಗೂ ನಾನು ಕಣ್ಣಾರೆ ಕಂಡ ಆಶ್ಚರ್ಯರಕರ ಹಾಗೂ ಸತ್ಯವಾದ ಘಟನೆ. ಒಂದು ದಿನ ನನ್ನ ಮನೆಯಿಂದ ತೋಟದ ಕಡೆಗೆ ಹೋಗಿತ್ತಿದ್ದೆ. ನನ್ನ ಜೊತೆಯಲ್ಲಿ ನನ್ನ ಮನೆಯ ನಾಯಿಯ 3 ಮರಿಗಳು ಹಿಂಬಾಲಿಸಿದವು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಒಂದು ಸಣ್ಣ ಹರಿಯಿತ್ತು. ಅಂದಾಜು 1 ಅಡಿ ಅಗಲ ಇರಬಹುದು. ಆಳ ಏನೂ ಇರಲಿಲ್ಲ. ಸಣ್ಣದಾಗಿ ನೀರು ಹರಿಯುತ್ತಿತ್ತು. ನಾನು ದಾಟಿಕೊಂಡು ಹೋಗುತ್ತಿದ್ದೆ. ನನ್ನ ಜೊತೆಯಲ್ಲಿ ಬಂದಿದ್ದ 3 ನಾಯಿಮರಿಗಳ ಪೈಕಿ ಒಂದು ನಾಯಿಮರಿ ಆ ಹರಿಯನ್ನು ದಾಟಿ ನನ್ನ ಜೋತೆಗೆ ಬಂದಿತು, ಇನ್ನೆರಡು ನಾಯಿಮರಿಗಳಿಗೆ ಹರಿ ದಾಟುವುದಾಗದೆ ಹರಿಯ ಆ ಬದಿಯಲ್ಲಿ ನಿಂತು ಬಿಟ್ಟವು. 10-12 ಹೆಜ್ಜೆ ಹೋಗುವಷ್ಟರಲ್ಲಿ ಆ ಮರಿಗಳು ಜೋರಾಗಿ ನಮ್ಮನ್ನು ಕೂಗಿಕೊಳ್ಳಲು ಪ್ರಾರಂಭಿಸಿದವು. ನನ್ನ ಜೋತೆಗೆ ಹರಿ ದಾಟ ಬಂದಿದ್ದ ನಾಯಿಮರಿ ಒಡುತ್ತ ಉಳಿದೆರಡು ಮರಿಗಳಿದ್ದಲ್ಲಿಗೆ ಹೋಗಿ ಹರಿಯನ್ನು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಹಾರಿತು. ಇದನ್ನು ನೋಡಿದ ಉಳಿದೆರಡು ಮರಿಗಳಿಗೆ ಉತ್ಸಾಹ ಬಂದಂತಾಗಿ ತಾವು ಕೂಡ ಹರಿಯನ್ನು ದಾಟಲು ಪ್ರಯತ್ನಿಸಿ ಯಶಸ್ವಿಯಾದವು.ಹರಿಯನ್ನು ದಾಟಿದ ಮರಿಗಳು ಸಂತೋಷದಿಂದ ಒಡಿ ಬಂದು ನಮ್ಮನ್ನು ಕೂಡಿಕೊಂಡವು.

ಈ ನಾಯಿಮರಿಗಳಲ್ಲಿನ ಸಹಕಾರ ಮೋಭಾವ ಹಾಗೂ ಹಿಂದೆ ಬಿದ್ದವರನ್ನು ತಮ್ಮೊಟ್ಟಿಗೆ ಕರೆದುಕೊಂಡು ಹೋಗುವ ಮನಸ್ಸು, ನಾವು ಮುಂದೆ ಹೋಗುವವರನ್ನು ಹಿಂಬಾಲಿಸಬೇಕು ಅವರ ಜೋತೆಯಲ್ಲಿ ಹೋಗಬೇಕು ಎನ್ನುವ ಮಹತ್ವಾಂಕಾಕ್ಷೆ ಎಲ್ಲವೂ ನಾವು ಮನುಷ್ಯರು ಕಲಿಯಬೇಕಾದ ಹಾಗೂ ಅನುಸರಿಸಬೇಕಾದ ವಿಷಯಗಳಲ್ಲವೇ?

– ಎಸ್.ಆರ್.ಸತೀಶಚಂದ್ರ.



## ಚನ್ನಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಾರಂಭ

ಬೆಳಗಾವಿಯ ಖಡೆಬಝಾರನಲ್ಲಿ ಚನ್ನಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿಯು ದಿನಾಂಕ 6/5/2011 ರಂದು ಉದ್ಘಾಟನೆಯಾಗಿ ಕಾರ್ಯಾರಂಭಮಾಡಿದೆ. ಸಹಕಾರಿಯ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಸಹಕಾರಿಗೆ ಶುಭಹಾರೈಸಿ ಸಹಕಾರಿಯ ಅಭಿವೃದ್ಧಿಗೆ ಇರುವ ಅವಕಾಶಗಳನ್ನು ಸದುಪಯೋಗಮಾಡಿಕೊಂಡು ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೆರವಾಗಬೇಕೆಂದು ಸಲಹೆ ಮಾಡಿದರು. ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ಶಿವಗೌಡ ಬಸಗೌಡ ಪಾಟೀಲ ಉಪಾಧ್ಯಕ್ಷ ಶ್ರೀ ರಾಜೇಶ.ಬಿರಾದಾರ ಹಾಗೂ ವ್ಯವಸ್ಥಾಪಕ ಶ್ರೀ ಶಿವಲಿಂಗ ಸಂಗೊಳ್ಳಿ ಅನೇಕ ಸದಸ್ಯರು ಸಾರ್ವಜನಿಕರು ಭಾಗವಹಿಸಿದ್ದರು.



## ಶ್ರೀ ವಿರಾಟ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನೆ

ಬೆಂಗಳೂರಿನಲ್ಲಿ ದಿನಾಂಕ ಜುಲೈ 15ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಶ್ರೀ ವಿರಾಟ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟಿಸಿ ಸಹಕಾರಿಗೆ ಶುಭಕೋರಿದರು. ದಿನದಿಂದ ದಿನಕ್ಕೆ ಸೌಹಾರ್ದ ಸಹಕಾರಿ ವ್ಯಕ್ತವನ್ನು ಆಶ್ರಯಿಸಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಇದೂಂದು ಉತ್ತಮ ಬೆಳವಣಿಗೆಯಾಗಿದೆ. ಜನರಲ್ಲಿ ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ತೃಪ್ತಿಯಿದೆ ಎಂದು ತಿಳಿಸಿ ಈ ಸೌಹಾರ್ದ ಸಹಕಾರಿಯಿಂದ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಮಾರಂಭದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಬಿ.ಎಸ್.ಮುನಿರೆಡ್ಡಿ, ಶ್ರೀ ಬಿ.ಎನ್.ಮುನಿರೆಡ್ಡಿ.ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ನಾಗರತ್ನ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಹಕಾರ ಇಲಾಖೆ ತಾನೇ ಮುತುವರ್ಜಿ ವಹಿಸಿ ಕಾಯಿದೆ ರೂಪಿಸಿತ್ತಾದರೂ ಒಳಗೊಳಗೇ ಆತಂಕ ಪಟ್ಟುಕೊಂಡಿತ್ತು. ಈ ಆತಂಕಕ್ಕೆ ಕಾರಣ ಎಂದರೆ ನಗರ ಪ್ರದೇಶದಲ್ಲಿ ಲಾಭದಲ್ಲಿ ಕೆಲಸಮಾಡುತ್ತಾ ಇರುವ ಸಂಘಗಳು ಈ ಸೌಹಾರ್ದ ಕಾಯಿದೆಗೆ ಯಾವ ರೀತಿ ಸ್ಪಂದಿಸುತ್ತವೆ ಎಂಬ ಅನುಮಾನ. ಸೌಹಾರ್ದ ಕಾಯಿದೆ ಜಾರಿಗೆ ಬಂದ 2001ನೇ ಇಸವಿಯಲ್ಲಿ ಸುಮಾರು 3000 ಸಂಘಗಳು ನಗರ ಪ್ರದೇಶಗಳಲ್ಲಿ ಇದ್ದ ಪತ್ತಿನ ಸಂಘಗಳಾಗಿದ್ದುವು. ಈ ಸಂಘಗಳಲ್ಲಿ ಸಾಮಾನ್ಯವಾಗಿ ಶೇ 80ಕ್ಕೂ ಹೆಚ್ಚು ಸಂಘಗಳು ಲಾಭದಲ್ಲಿ ಕೆಲಸ ಮಾಡುತ್ತಿರುತ್ತವೆ; ಅಲ್ಲದೆ ಇವುಗಳಲ್ಲಿ ಸರ್ಕಾರದ ಹಣ ಇಲ್ಲವೇ ಇಲ್ಲ ಎಂಬಷ್ಟು ಕಡಿಮೆ. ನಗರಗಳಲ್ಲಿ ಇರುವುದರಿಂದ ಹೊಸ ವಿಚಾರಗಳು ಅವುಗಳ ಮೇಲೆ ಬಂದು ಬೀಳುತ್ತಿರುತ್ತವೆ. ಅಲ್ಲದೆ ಖಾಸಗಿ ಲೆಕ್ಕ ಪರಿಶೋಧನೆ, ಆದುನಿಕ ಲೆಕ್ಕಪತ್ರವಿಧಾನ ಮುಂತಾದುವುಗಳು ಅವುಗಳಿಗೆ ಕಷ್ಟವಿಲ್ಲದೆ ಸಿಗಲು ಸಾಧ್ಯವಿದೆ.

ಅವುಗಳಿಗೆ ಕಷ್ಟವಿಲ್ಲದೆ ಸಿಗಲು ಸಾಧ್ಯವಿದೆ. ಆದ್ದರಿಂದ ಅವು ಮೂಲಕಾಯಿದೆಯಿಂದ ಬಿಡುಗಡೆ ಹೊಂದಬಹುದಲ್ಲವೇ ? ಆದರೆ, ಒಂದು ದಶಕದ ನಂತರ ನೋಡಿದಾಗ ಹಾಗೆ ಆಗಿಲ್ಲ. ಶೇ 20 ರಷ್ಟು ಸಹ ಸೌಹಾರ್ದ ಕಾಯಿದೆಗೆ ಬಂದಂತೆ ಕಾಣುವುದಿಲ್ಲ.

ಏಕೆ ಸೌಹಾರ್ದ ಕಾಯಿದೆ ಇಂತಹ ಸಂಘಗಳನ್ನು ಸಹ ಆಕರ್ಷಿಸುತ್ತಿಲ್ಲ? ಈ ಒಂದು ಪ್ರಶ್ನೆಯೇ ಸೌಹಾರ್ದ ಕಾಯಿದೆಯನ್ನು ಮೂಲ ಕಾಯಿದೆಯೊಂದಿಗೆ ಮತ್ತೆ ಮತ್ತೆ ಹೋಲಿಸಿ ನೋಡುವಂತೆ ಮಾಡುತ್ತದೆ.ಹೀಗೆ ಮಾಡುವಾಗ ವಿಷಯಕ್ಕೆ ಸಂಬಂಧಿಸಿದಂತೆ ನಾವು ನೋಡಬೇಕಾಗಿರುವುದು ಕೆಲವು ಹೋಲಿಕೆಗಳನ್ನು. ಅವು ಯಾವುವು ? ನಮ್ಮ ಮೂಲಕಾಯಿದೆ ಈ ಸುಮಾರು 50 ವರ್ಷಗಳಿಗೂ ಮೀರಿದ ಅವಧಿಯಲ್ಲಿ, ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ಸ್ಥಿತಿಯಲ್ಲಿ ಇತ್ತಷ್ಟೆ. ಅವುಗಳಲ್ಲಿ ಮುಖ್ಯವಾದವುಗಳು ಎಂದರೆ,

1. ಈಗ ( ಎಂದರೆ 01-01-11 ರಲ್ಲಿ) ಇರುವ ಸ್ಥಿತಿ.
2. ಸೌಹಾರ್ದ ಕಾಯಿದೆ ಜಾರಿಗೆ ಬಂದಾಗ-ಎಂದರೆ 01-01-2001ರಲ್ಲಿ- ಇದ್ದ ಸ್ಥಿತಿ.
3. ಕೇಂದ್ರ ಸರ್ಕಾರ ಮಾದರಿ ಕಾಯಿದೆ ಸಲಹೆ ಮಾಡಿದಾಗ-ಎಂದರೆ 1992ರಲ್ಲಿ- ಇದ್ದ ಸ್ಥಿತಿ.
4. ಮದ್ರಾಸ್ ನ ಸಮ್ಮೇಳನದ ನಿರ್ಣಯಗಳ ಫಲವಾಗಿ ತಿದ್ದುಪಡಿಗಳನ್ನು ಮಾಡುವ ಮುಂಚೆ - ಎಂದರೆ 1975ರಲ್ಲಿ - ಇದ್ದ ಸ್ಥಿತಿ ಮತ್ತು
5. ಮೂಲ ಕಾಯಿದೆ ಜಾರಿಗೆ ಬಂದಾಗ - ಎಂದರೆ 1959 ರಲ್ಲಿ - ಇದ್ದ ಸ್ಥಿತಿ.

ಮೂಲ ಕಾಯಿದೆಯ ಈ ಒಂದೊಂದು ಸ್ಥಿತಿಯಲ್ಲೂ ಅದರಲ್ಲಿದ್ದ ಅವಕಾಶಗಳನ್ನು ಸೌಹಾರ್ದ ಕಾಯಿದೆಯ ಅವಕಾಶಗಳಿಗೆ ಹೋಲಿಕೆ ಮಾಡಿದಾಗ ಬರುವ ವ್ಯತ್ಯಾಸಗಳೇನು ಮತ್ತು ಸಾಮ್ಯಗಳೇನು ಎಂಬುದನ್ನು ಗಮನಿಸಿದರೆ ಸೌಹಾರ್ದ ಕಾಯಿದೆಯ ಪ್ರಸ್ತುತತೆ / ಅಪ್ರಸ್ತುತತೆಗಳ ಬಗ್ಗೆ ಅಥವಾ ಸಫಲತೆ / ವಿಫಲತೆಗಳ ಬಗ್ಗೆ ಒಂದು ಅಭಿಪ್ರಾಯ ರೂಪಗೊಳ್ಳಲು ಸಹಾಯವಾಗಬಹುದು ಎನಿಸುತ್ತದೆ. ಮೂಲ ಕಾಯಿದೆಯ ವಿವಿಧ ಅವಸ್ಥಾಂತರಗಳ ಹಿನ್ನಲೆಯು ಸೌಹಾರ್ದ ಕಾಯಿದೆ ಬರಲು ಕಾರಣವೇನು ಎಂಬುದನ್ನು ತಿಳಿಸುತ್ತಲೇ ಸೌಹಾರ್ದ ಕಾಯಿದೆಯ ಪ್ರಸ್ತುತತೆ, ಔಚಿತ್ಯತೆಗಳ ಮೇಲೂ ಬೆಳಕು ಚೆಲ್ಲಬಹುದು. ಇದರಿಂದ ಅದರ ಸಫಲತೆ / ವಿಫಲತೆಗಳ ಬಗ್ಗೆ ಸಹ ಗೊತ್ತಾಗಬಹುದು. ಏಕೆಂದರೆ ಸೌಹಾರ್ದ ಕಾಯಿದೆ ರೂಪಗೊಳ್ಳಲು ಇದ್ದ ಪ್ರಮುಖ ಕಾರಣ ಎಂದರೆ - ಎಲ್ಲರಿಗೂ ಗೊತ್ತಿರುವಂತೆ - ಮೂಲ ಕಾಯಿದೆಯಲ್ಲಿ ಸರ್ಕಾರದ ಹಸ್ತಕ್ಷೇಪ / ಹತೋಟಿ / ನಿರ್ಬಂಧ ಮುಂತಾದುವಕ್ಕೆ ಇದ್ದ ಅವಕಾಶಗಳು. ಈ ಅವಕಾಶಗಳು ಕಾಲಕ್ರಮೇಣ ಮೂಲ ಕಾಯಿದೆಗೆ ಬಂದು ಸೇರಿ ಕಡೆಗೆ ಸಹಕಾರಿಗಳಲ್ಲಿ ಮಾತ್ರವಲ್ಲದೆ ಸಹಕಾರಿ ಚಳುವಳಿಯಲ್ಲಿ ಆಸಕ್ತರಾಗಿರುವ ಎಲ್ಲರಲ್ಲೂ ಆಕ್ರೋಶವನ್ನು ಉಂಟುಮಾಡಿದುವು. ಈ ಆಕ್ರೋಶವು ಹೊಸದಾಗಿ ಬಂದ ಅವಕಾಶಗಳ ಮೇಲೆ ಮಾತ್ರವಲ್ಲದೆ ಮೂಲ ಕಾಯಿದೆಯಲ್ಲಿ ಮೊದಲಿನಿಂದಲೂ ಇದ್ದ ಅವಕಾಶಗಳ ಮೇಲೂ ಹರಡಿತು. ಅವು ಯಾವುವು, ಅವು ಮೂಲ ಕಾಯಿದೆಗೆ ಯಾವಾಗ ಬಂದವು ಎಂದು ಪರಿಶೀಲಿಸಿದರೆ ಸೌಹಾರ್ದ ಕಾಯಿದೆ ಉಂಟಾದ ಪರಿಸ್ಥಿತಿಗಳ ಅರಿವಾಗುತ್ತದೆ.

ಮುಂದಿನ ಸಂಚಿಕೆಗೆ...

## ಸಹಕಾರಿಗಳ ಆಕ್ರೋಶಕ್ಕೆ ಗುರಿಯಾಗಿರುವ ಇಂತಹ ನಿರ್ಬಂಧೀಯ ಅವಕಾಶಗಳನ್ನು ಕೆಳಗೆ ಕಾಣಿಸಿದಂತೆ ಪಟ್ಟಿ ಮಾಡಬಹುದು :

1. ಸಂಘಗಳ ಉಪನಿಯಮಗಳನ್ನು ನಿಬಂಧಕರೇ ಬದಲಾಯಿಸುವುದು;
2. ಸಂಘಗಳ ಅನುಮತಿ ಇಲ್ಲದೆ ಸಂಘದಲ್ಲಿ ಸದಸ್ಯತ್ವ ಉಂಟಾಗುವುದು;
3. ಸಂಘಗಳನ್ನು ಬಲವಂತವಾಗಿ ವಿಲೀನ/ವಿಭಜನೆ/ ಪುನರ್ವಿಂಗಡಣೆ ಮಾಡುವುದು
4. ಸಂಘಗಳ ಆಡಳಿತ ಮಂಡಳಿಗಳನ್ನು ನಿಬಂಧಕರು ಅಂಗೀಕೃತ ವಿಧಾನದ ಮೂಲಕ ಕಿತ್ತುಹಾಕುವುದು;
5. ಸಂಘಗಳ ಆಡಳಿತ ಮಂಡಳಿಗಳ ಸದಸ್ಯರನ್ನು ನಿಬಂಧಕರು ಅಂಗೀಕೃತ ವಿಧಾನದ ಮೂಲಕ ಅನರ್ಹಗೊಳಿಸುವುದು / ತೆಗೆದುಹಾಕುವುದು;
6. ಸಂಘಗಳ ಆಡಳಿತಮಂಡಳಿಗಳನ್ನು ಸರ್ಕಾರವು ನೋಟೀಸ್ ನೀಡದೆ ತೆಗೆದು ಹಾಕುವುದು;
7. ಸಂಘಗಳ ಆಡಳಿತ ಮಂಡಳಿಗಳಲ್ಲಿ ಒಟ್ಟು ಸಂಖ್ಯೆಯ 1/3ರಷ್ಟು ಸದಸ್ಯರನ್ನು ಸರ್ಕಾರ ನೇಮಿಸುವುದು;
8. ಸರ್ಕಾರದ ಪ್ರತಿನಿಧಿಗಳಿಗೆ ವೀಟೋ ಅಧಿಕಾರ;
9. ಸಂಘಗಳ ಆಡಳಿತ ಮಂಡಳಿ ನಿರ್ಣಯಗಳನ್ನು ನಿಬಂಧಕರು ತಡೆಹಿಡಿಯುವುದು / ಅನೂರ್ಜಿತ ಗೊಳಿಸುವುದು;
10. ಸಂಘಗಳಿಗೆ ಅವುಗಳ ಆಡಳಿತ / ಆರ್ಥಿಕ ವ್ಯವಹಾರ ಮುಂತಾದುವುಗಳ ಬಗ್ಗೆ ನಿರ್ದೇಶನ ನೀಡುವುದು;
11. ಸಂಘಗಳ ಆಡಳಿತವನ್ನು ಭಾಗಶ: ಸ್ವಾಧೀನಕ್ಕೆ ತೆಗೆದುಕೊಳ್ಳುವುದು;
12. ಸರ್ಕಾರದಿಂದ ಲೆಕ್ಕ ಪರಿಶೋಧನೆ;
13. ಸರ್ಕಾರದಿಂದ ವಿಚಾರಣೆ / ಪರಿವೀಕ್ಷಣೆ;
14. ಸಂಘಗಳ ಆಡಳಿತ ಮಂಡಳಿಗಳಿಗೆ ಚುನಾವಣೆಗಳನ್ನು ಬೇಕಾಬಿಟ್ಟಿ ಮುಂದೂಡುವುದು;
15. ರಾಜಕೀಯ ಕಾರಣಕ್ಕಾಗಿ ಕೆಲವು ಆಯ್ದ ಸಂಘಗಳಿಗಾಗಿಯೇ ಪ್ರತ್ಯೇಕವಾಗಿ ಕಾಯಿದೆ ತಿದ್ದುಪಡಿ ಮಾಡುವುದು;
16. ಸಿಬ್ಬಂದಿ ನೇಮಕಮಾಡುವುದು / ಸಂಬಳ ಇತ್ಯಾದಿ ನಿಗದಿಮಾಡುವುದು ಮುಂತಾದುವುಗಳಿಗೆ ನಿಬಂಧಕರ ಅನುಮತಿ ಕಡ್ಡಾಯವಾಗಿರುವುದು;
17. ಹೆಚ್ಚಿನ ದರದಲ್ಲಿ ಲಾಭಾಂಶ ನೀಡಲು ನಿರ್ಬಂಧ;
18. ಸಾಲಗಳನ್ನು ತರಲು ಮಿತಿಗಳು;
19. ಸಹಕಾರಕ್ಷೇತ್ರದ ಹೊರಗೆ ಪಾಲುಗಾರಿಕೆ, ಇತ್ಯಾದಿಗಳಿಗೆ ನಿರ್ಬಂಧ; ಇತ್ಯಾದಿಗಳು.

ಈ ಮೇಲಿನವು ಸಹಕಾರಿ ಕಾಯಿದೆಯಲ್ಲಿ 50 ವರ್ಷಗಳಲ್ಲಿ ಬದಲಾವಣೆಗಳಿಗೆ ಗುರಿಯಾಗಿರುವ ಅಂಶಗಳು. ಬದಲಾವಣೆಗಳು ಆಗದೆ ಮೂಲಕಾಯಿದೆ ಯಲ್ಲಿ ಉಳಿದಿರುವ ಅಂಶಗಳಲ್ಲಿ ಕೆಲವು ಸೌಹಾರ್ದ ಕಾಯಿದೆಯಲ್ಲೂ ಇವೆ.

## ಬಯಲಿನಲ್ಲಿ ಪ್ರಣಯದ ಗುರಿ

**ಎಂ.ಎನ್.ಅಶ್ವತ್ಥ ನಾರಾಯಣ,**
ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಬೆಂಗಳೂರು



ಮೂಲ ಕಾಯಿದೆಯ ಈ ಒಂದೊಂದು ಸ್ಥಿತಿಯಲ್ಲೂ ಅದರಲಿದ್ದ ಅವಕಾಶಗಳನ್ನು ಸೌಹಾರ್ದ ಕಾಯಿದೆಯ ಅವಕಾಶಗಳಿಗೆ ಹೋಲಿಕೆ ಮಾಡಿದಾಗ ಬರುವ ವ್ಯತ್ಯಾಸಗಳೇನು ಮತ್ತು ಸಾಮ್ಯಗಳೇನು ಎಂಬುದನ್ನು ಗಮನಿಸಿದರೆ ಸೌಹಾರ್ದ ಕಾಯಿದೆಯ ಪ್ರಸ್ತುತತೆ / ಅಪ್ರಸ್ತುತತೆಗಳ ಬಗ್ಗೆ ಅಥವಾ ಸಫಲತೆ / ವಿಫಲತೆಗಳ ಬಗ್ಗೆ ಒಂದು ಅಭಿಪ್ರಾಯ ರೂಪಗೊಳ್ಳಲು ಸಹಾಯವಾಗಬಹುದು ಎನಿಸುತ್ತದೆ. ಮೂಲ ಕಾಯಿದೆಯ ವಿವಿಧ ಅವಸ್ಥಾಂತರಗಳ ಹಿನ್ನಲೆಯು ಸೌಹಾರ್ದ ಕಾಯಿದೆ ಬರಲು ಕಾರಣವೇನು ಎಂಬುದನ್ನು ತಿಳಿಸುತ್ತಲೇ ಸೌಹಾರ್ದ ಕಾಯಿದೆಯ ಪ್ರಸ್ತುತತೆ, ಔಚಿತ್ಯತೆಗಳ ಮೇಲೂ ಬೆಳಕು ಚೆಲ್ಲಬಹುದು.

# ಸೌಹಾರ್ದ ಕಾಯಿದೆಯ ಪ್ರಸ್ತುತತೆ :

ಕರ್ನಾಟಕ ಸೌಹಾರ್ದ ಕಾಯಿದೆಯು ಬಂದು ಈಗಾಗಲೇ 10 ವರ್ಷಗಳು ಕಳೆದಿವೆ. ಈಗ ಸಾವಿರಾರು ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ಕೆಲಸ ಮಾಡುತ್ತಿವೆ. ಇವುಗಳಲ್ಲಿ ಬಹುಪಾಲು ಈ ಕಾಯಿದೆಯಲ್ಲಿ ಹೊಸದಾಗಿ ನೋಂದಣಿಯಾದಂತವುಗಳು. ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ , 1959 (ಇದನ್ನು ಮೂಲ ಕಾಯಿದೆ ಎನ್ನೋಣ) ಯಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳಲ್ಲಿ ಈ ಕರ್ನಾಟಕ ಸೌಹಾರ್ದ ಕಾಯಿದೆ, 1997 (ಇದನ್ನು ಇನ್ನು ಮುಂದೆ ಸೌಹಾರ್ದ ಕಾಯಿದೆ ಎನ್ನೋಣ) – ಇದಕ್ಕೆ ಬಂದವುಗಳ ಸಂಖ್ಯೆ ಕಡಿಮೆ.

ವಿಶೇಷವೇನೆಂದರೆ ಸೌಹಾರ್ದ ಕಾಯಿದೆ ಜಾರಿಗೆ ಬಂದಾಗಿನಿಂದಲೂ ಅದರ ಪ್ರಸ್ತುತತೆಯ ಬಗ್ಗೆ ಪ್ರಶ್ನೆಗಳು ಏಳುತ್ತಲೇ ಇವೆ. ಅದರಲ್ಲಿ ಅಚ್ಚರಿಯೇನೂ ಇಲ್ಲ. ಏಕೆಂದರೆ, ಇದು ಜಾರಿಗೆ ಬರುವ ಮುಂಚಿನಿಂದಲೂ ಸಹ ಅದರ ಅಗತ್ಯತೆ, ಪ್ರಸ್ತುತತೆ, ಔಚಿತ್ಯ ಮುಂತಾದುವುಗಳ ಬಗ್ಗೆ ವಾದ ವಿವಾದಗಳು ನಡೆದಿದ್ದವು. ಈ ಸೌಹಾರ್ದ ಕಾಯಿದೆ, 1997 ರಲ್ಲೇ ರಚಿತವಾದರೂ ಸಹ , ಕರ್ನಾಟಕ ವಿಧಾನಮಂಡಲ ಅಂಗೀಕರಿಸಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ಪಡೆದು ಕಾಯಿದೆಯಾಗಲು ದಿನಾಂಕ : 28–03–2000ರಷ್ಟು ದೀರ್ಘ ಸಮಯ ಹಿಡಿದದ್ದು ಮಾತ್ರವಲ್ಲದೆ, ಅದು ಜಾರಿಗೆ ಬರಲು ದಿನಾಂಕ : 01–01–2001 ರವರೆಗೂ ಕಾಯಬೇಕಾಯಿತು.

ಸೌಹಾರ್ದ ಕಾಯಿದೆ ಕರ್ನಾಟಕದಲ್ಲಿ ಮೂಡಿ ಬರಲು ಕಾರಣವಾದದ್ದು ಭಾರತ ಸರ್ಕಾರ ಎಲ್ಲ ರಾಜ್ಯಗಳಿಗೂ ಸಲಹೆ ಮಾಡಿ ಕಳಿಸಿದ್ದ ಮಾದರಿ ಕಾಯಿದೆ. ಈ ಮಾದರಿ ಕಾಯಿದೆ ರಚಿತವಾದದ್ದು 1991 ರಲ್ಲಿ. ಇದರ ಹಿನ್ನೆಲೆಯ ದೀರ್ಘ ಇತಿಹಾಸ ಎಲ್ಲರಿಗೂ ತಿಳಿದದ್ದೇ ಆಗಿದೆ. 1966ರಲ್ಲಿ, ಅಂದಿನ ಮದ್ರಾಸಿನಲ್ಲಿ, ನಡೆದ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಕೈಕೊಂಡ ನಿರ್ಣಯಗಳ ಹಿನ್ನೆಲೆಯಲ್ಲಿ ಸಹಕಾರಿ ಕಾನೂನಿನಲ್ಲಿ ಬದಲಾವಣೆಗಳಾಗುತ್ತಾ ಬಂದವು; ಈ ಬದಲಾವಣೆಗಳನ್ನು ಪಟ್ಟಭದ್ರ ಹಿತಾಸಕ್ತಿಗಳ ನಿವಾರಣೆಗಾಗಿ ಎಂದು ತರಲಾಯಿತು. ಇದರಿಂದ ಸಹಕಾರಿ ಸಂಘಗಳ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ನಡೆಸಲು ಅನುಕೂಲವಾದದ್ದು ಮಾತ್ರವಲ್ಲದೆ ಕಾಯಿದೆಯ ಅನೇಕ ದುರುಪಯೋಗಗಳಿಗೂ ಕಾರಣವಾದವು. ಆದರೂ ಕರ್ನಾಟಕದ ಕಾಯಿದೆಯಲ್ಲಿ ಅತಿರೇಕದ ಬದಲಾವಣೆಗಳು ಆಗಲಿಲ್ಲ ಎಂದೇ ಹೇಳಬೇಕು. ಉದಾಹರಣೆಗೆ ಸಂಘದ ನಿರ್ಣಯಗಳನ್ನು ರದ್ದುಪಡಿಸುವುದು, ಸರ್ಕಾರದ ಪ್ರತಿನಿಧಿಗಳಿಗೆ ನಿರ್ಣಯಗಳನ್ನು ತಡೆಹಿಡಿಯುವ ಅಧಿಕಾರ (ವೀಟೋ) ಮುಂತಾದ (ದಿನನಿತ್ಯದ ಕಾರ್ಯಕಲಾಪಗಳಲ್ಲೂ ಸರ್ಕಾರವು ಮೂಗು ತೂರಿಸುವಂತಹ) ಕಾನೂನು ಅವಕಾಶಗಳು ಕರ್ನಾಟಕದಲ್ಲಿ ಬರಲಿಲ್ಲ. ಆದರೂ ದೇಶಾದ್ಯಂತ ರಾಜ್ಯಗಳ ಸಹಕಾರಿ ಕಾನೂನುಗಳಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಮಾಡಿದ ಅವಕಾಶಗಳು ಸುಮಾರು ಎರಡು ದಶಕಗಳ ಕಾಲ ಸಹಕಾರಿ ಕ್ಷೇತ್ರವನ್ನು ಆಳಿದ ನಂತರ ಅದಕ್ಕೆ ವಿರೋಧವಾಗಿ ಇನ್ನೊಂದು ಅಲೆ ಎದ್ದು ಮಾದರಿ ಕಾಯಿದೆಗೆ ಕಾರಣವಾಯಿತಷ್ಟೆ.

ಭಾರತ ಸರ್ಕಾರದ ಸಲಹೆ ಇದ್ದದ್ದು – – ಎಲ್ಲ ರಾಜ್ಯಗಳಿಗೂ ತಿಳಿಸಿದ್ದು – – ಇರುವ ಸಹಕಾರಿ ಕಾಯಿದೆಯನ್ನು ತೆಗೆದುಹಾಕಿ ಅದರ ಜಾಗದಲ್ಲಿ ಮಾದರಿ ಕಾಯಿದೆಯನ್ನು ತರಬೇಕು ಎಂದು. ಆದರೆ ಯಾವ ರಾಜ್ಯವೂ ಈ ಸಲಹೆ ಪಾಲಿಸಲಿಲ್ಲ. ವಿಪರ್ಯಾಸ ಎಂದರೆ ಸ್ವತ: ಕೇಂದ್ರ ಸರ್ಕಾರ ಸಹ ಈ ನೀತಿ ಅನುಸರಿಸಲಿಲ್ಲ. ಕೇಂದ್ರ ಸರ್ಕಾರ ಸಹ ಬಹುರಾಜ್ಯ ಸಹಕಾರಿ ಸಂಘಗಳ ಕಾಯಿದೆಯನ್ನು ಜಾರಿಗೊಳಿಸುತ್ತಿದೆಯಲ್ಲವೇ. ಈ ಬಗ್ಗೆ ಮೊದಲ ಹೆಜ್ಜೆ ಇಟ್ಟ ಆಂಧ್ರ ಪ್ರದೇಶ ( ನಮ್ಮ ಮೂಲ ಕಾಯಿದೆಗೆ ಸಂವಾದಿಯಾಗಿ )ಇದ್ದ ಆಂಧ್ರ ಪ್ರದೇಶ ಸಹಕಾರ ಸಂಘಗಳ ಕಾಯಿದೆಯ ಜೊತೆಗೆ ಮಾದರಿ ಕಾಯಿದೆಯನ್ನು ಹೋಲುವ ಇನ್ನೊಂದು ಕಾಯಿದೆಯನ್ನು ಜಾರಿಗೆ ತಂದಿತು. ಇದನ್ನು ದೇಶಾದ್ಯಂತ ಸಮಾನಾಂತರ ಕಾಯಿದೆ ಎಂದು ಗುರುತಿಸಲಾಯಿತು. ಏಕೆಂದರೆ ಇದರಿಂದಾಗಿ ಇರುವ ಒಂದು ಕಾಯಿದೆಯ ಜೊತೆಗೆ ಇದೂ ಸೇರಿ ಎರಡು ಸಹಕಾರಿ ಕಾಯಿದೆಗಳು ಉಂಟಾದುವು. ಅನೇಕ ರಾಜ್ಯಗಳು ಈ ದಾರಿಯನ್ನೇ ಹಿಡಿದವು. ಕರ್ನಾಟಕವೂ ಈ ದಾರಿಯನ್ನೇ ಅನುಸರಿಸಿ ಮೂಲ ಕಾಯಿದೆಯ ಜೊತೆಗೆ ಸೌಹಾರ್ದ ಕಾಯಿದೆಯನ್ನು ಜಾರಿಗೆ ತಂದಿತು.

ಆದರೆ ಈ ಸೌಹಾರ್ದ ಕಾಯಿದೆಗೆ ಎಷ್ಟರ ಮಟ್ಟಿಗೆ ಸ್ವಾಗತ ಸಿಕ್ಕಿತ್ತು ? ಸೌಹಾರ್ದದ – – ಗೆಳೆತನದ – – ಸ್ವಾಗತ ಸಿಗಲಿಲ್ಲ ಎಂದೇ ಹೇಳಬೇಕು. ಏಕೆಂದರೆ ಸಹಕಾರ ಕಾಯಿದೆಗೆ ಮುಖ್ಯವಾಗಿ ಸಂಬಂಧಿಸಿದವರೆಂದರೆ ಸಹಕಾರಿಗಳು, ಸರ್ಕಾರದಲ್ಲಿನ ಸಹಕಾರ ಇಲಾಖೆ ಮುಂತಾದವರು. ಈ ಕಾಯಿದೆಯಲ್ಲಿ ಸರ್ಕಾರದ ಧನಸಹಾಯಕ್ಕೆ ನಿಷೇಧವಿದ್ದ ಹಿನ್ನೆಲೆಯಲ್ಲಿ ಸಹಕಾರಿಗಳಿಗೆ ಇದು ಹಿಡಿಸಲಿಲ್ಲ. ಸಹಕಾರ ಇಲಾಖೆ ತಾನೇ ಮುತುವರ್ಜಿ ವಹಿಸಿ ಕಾಯಿದೆ ರೂಪಿಸಿತ್ತಾದರೂ ಒಳಗೊಳಗೇ ಆತಂಕ ಪಟ್ಟುಕೊಂಡಿತ್ತು. ಈ ಆತಂಕಕ್ಕೆ ಕಾರಣ ಎಂದರೆ ನಗರ ಪ್ರದೇಶದಲ್ಲಿ ಲಾಭದಲ್ಲಿ ಕೆಲಸಮಾಡುತ್ತಾ ಇರುವ ಸಂಘಗಳು ಈ ಸೌಹಾರ್ದ ಕಾಯಿದೆಗೆ ಯಾವ ರೀತಿ ಸ್ಪಂದಿಸುತ್ತವೆ ಎಂಬ ಅನುಮಾನ. ಸೌಹಾರ್ದ ಕಾಯಿದೆ ಜಾರಿಗೆ ಬಂದ 2001ನೇ ಇಸವಿಯಲ್ಲಿ ಸುಮಾರು 3000 ಸಂಘಗಳು ನಗರ ಪ್ರದೇಶಗಳಲ್ಲಿ ಇದ್ದ ಪತ್ತಿನ ಸಂಘಗಳಾಗಿದ್ದುವು. ಈ ಸಂಘಗಳಲ್ಲಿ ಸಾಮಾನ್ಯವಾಗಿ ಶೇ 80ಕ್ಕೂ ಹೆಚ್ಚು ಸಂಘಗಳು ಲಾಭದಲ್ಲಿ ಕೆಲಸ ಮಾಡುತ್ತಿರುತ್ತವೆ; ಅಲ್ಲದೆ ಇವುಗಳಲ್ಲಿ ಸರ್ಕಾರದ ಹಣ ಇಲ್ಲವೇ ಇಲ್ಲ ಎಂಬಷ್ಟು ಕಡಿಮೆ. ನಗರಗಳಲ್ಲಿ ಇರುವುದರಿಂದ ಹೊಸ ವಿಚಾರಗಳು ಅವುಗಳ ಮೇಲೆ ಬಂದು ಬೀಳುತ್ತಿರುತ್ತವೆ. ಅಲ್ಲದೆ ಖಾಸಗಿ ಲೆಕ್ಕ ಪರಿಶೋಧನೆ, ಆದುನಿಕ ಲೆಕ್ಕಪತ್ರವಿಧಾನ ಮುಂತಾದುವುಗಳು



# ಉಪ ವಿಧಿಗಳು

**ಭಾಗ – 5**

ವೈ. ಕುಮಾರ
ಉಪಪ್ರಧಾನ ವ್ಯವಸ್ಥಾಪಕರು

ಸೌಹಾರ್ದ ಸಹಕಾರಿಯ ಕಾರ್ಯಾಚರಣೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ನಿಯಮಗಳ ನಂತರ ಮಹತ್ವದ ಸ್ಥಾನ ಸಹಕಾರಿಗಳ ಉಪವಿಧಿಗಳಿಗೆ ಇರುತ್ತದೆ. ಪ್ರತಿಯೊಂದು ಸಹಕಾರಿಯು ಒಂದು ದೇಶದ ಸಂವಿಧಾನಕ್ಕೆ ಕೊಡುವ ಮಹತ್ವವನ್ನು ಈ ಉಪವಿಧಿಗೆ ಕೊಡಬೇಕಾಗುತ್ತದೆ. ಈ ಉಪವಿಧಿಗಳು ಒಳಗೊಂಡಿರುವ ವಿಷಯಗಳ ಬಗ್ಗೆ ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಯಾವುದೇ ಒಂದು ಸಹಕಾರಿಯ ಸುಗಮ ಆಡಳಿತ ನಿರ್ವಹಣೆಗೆ ಉಪವಿಧಿಗಳು ಎಷ್ಟು ಮುಖ್ಯವೋ, ಆಗೆಯೇ, ಉಪವಿಧಿಗಳಿಗೆ ತರುವ ತಿದ್ದುಪಡಿಯೂ ಸಹ ಸಹಕಾರಿಯ ಆಡಳಿತ ನಿರ್ವಹಣೆಗೆ ಸಹಕಾರಿಯಾಗಲಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಾಯ್ದೆ ಕಲಂ 11ರಲ್ಲಿ ಸಹಕಾರಿಯ ಉಪವಿಧಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ವಿವರಿಸಲಾಗಿದೆ. ಕಲಂ 11 ರಲ್ಲಿ 9 ಉಪಕಲಂಗಳನ್ನು ಸೇರಿಸಿದ್ದು, ಈ 9 ಉಪಕಲಂಗಳಲ್ಲಿ ಉಪವಿಧಿಗಳ ತಿದ್ದುಪಡಿಗೆ ಸಂಬಂದಿಸಿದಂತೆ ಪೂರ್ಣ ವಿವರವನ್ನು ನೀಡಲಾಗಿದೆ.

ಕಾಯ್ದೆ ಕಲಂ 11(1) ರಂತೆ, ಒಂದು ಸಹಕಾರಿಯು ಅದರ ಉಪವಿಧಿಗಳ ಯಾವುದೇ ಉಪಬಂಧವನ್ನು ತನ್ನ ಸಾಮಾನ್ಯ ಸಭೆ ಅಥವಾ ಪ್ರಾತಿನಿಧಿಕ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದಾಗಿದೆ. ಉಪವಿಧಿಗಳನ್ನು ತಿದ್ದುಪಡಿ ಮಾಡುವ ನಿರ್ಣಯ ಅಂಗೀಕರಿಸುವ ಅಂತಹ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರಲ್ಲಿ, ಬಹುಸಂಖ್ಯೆಯ ಅಥವಾ ಹಾಜರಿದ್ದು ಮತ ನೀಡಿದ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದಾಗಿದೆ.



ಪರಂತು, ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿಯೊಬ್ಬ ಸದಸ್ಯನಿಗೂ ಇಪ್ಪತ್ತು ಪೂರ್ಣ ದಿನಗಳಿಗೆ ಕಡಿಮೆ ಇಲ್ಲದಂತೆ, ಪ್ರಸ್ತಾವಿತ ತಿದ್ದುಪಡಿಯ ಪ್ರತಿಯೊಂದಿಗೆ, ಸಭೆಯ ನೋಟೀಸನ್ನು ನೀಡಬೇಕು ಮತ್ತು ಸಭೆ ನಡೆಯುವ ದಿನಾಂಕದ ನಿಕಟ ಪೂರ್ವದ ಇಪ್ಪತ್ತು ದಿನಗಳ ಅವಧಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಅಂಥ ನೋಟೀಸನ್ನು ಮತ್ತು ಪ್ರಸ್ತಾವಿತ ತಿದ್ದುಪಡಿಯ ಪ್ರತಿಯನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು.

ಉಪವಿಧಿಗಳಿಗೆ ತಿದ್ದುಪಡಿ ಅಂಗೀಕರಿಸಿದ ಸಭೆಯ ದಿನಾಂಕದಿಂದ 30 ದಿನಗಳ ಅವಧಿಯ ಒಳಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಸಂಬಂಧಿಸಿದ ನಿಬಂಧಕರಿಗೆ ಕಳುಹಿಸತಕ್ಕದ್ದು ಎಂದು ಕಲಂ 11(2)ರಲ್ಲಿ ವಿವರಿಸಿದೆ.

ಕಾಯ್ದೆ ಕಲಂ 11(3) ರಂತೆ, ನಿಬಂಧಕರಿಗೆ ಕಳುಹಿಸುವ ಪ್ರತಿಯೊಂದು ಅರ್ಜಿಯನ್ನು ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿರತಕ್ಕದ್ದು ಮತ್ತು ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ನಿರ್ಣಯದ ಮೂರು ಪ್ರತಿಗಳೊಂದಿಗೆ ಈ ಮುಂದಿನ ವಿವರಗಳು ಅರ್ಜಿಯೊಂದಿಗೆ ಇರತಕ್ಕದ್ದು, ಎಂದರೆ:–

(ಎ) ತಿದ್ದುಪಡಿಯನ್ನು ಅನುಮೋದಿಸಿದಂಥ ಸಭೆ ನಡೆದ ದಿನಾಂಕ;

(ಬಿ) ಅಂಥ ಸಭೆಯ ದಿನಾಂಕದಂದು ಸಹಕಾರಿಯ ಪಟ್ಟಿಯಲ್ಲಿರುವ ಮತ ನೀಡಲು ಅರ್ಹರಾಗಿದ್ದ ಸದಸ್ಯರ ಒಟ್ಟು ಸಂಖ್ಯೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ನಿರ್ಣಯಕ್ಕೆ ಮತ ನೀಡಿದ ಅರ್ಹ ಸದಸ್ಯರ ಸಂಖ್ಯೆ.

(ಸಿ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಪ್ರಸ್ತಾವಿತ ತಿದ್ದುಪಡಿಗಳು 10 ನೇ ಪ್ರಕರಣದ (3) ನೇ ಉಪ ಪ್ರಕರಣಕ್ಕೆ ಅನುಸಾರವಾಗಿವೆ ಎಂದು ತಿಳಿಸಿ ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರ.

ಉಪ ಕಲಂ (4) ರಂತೆ ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿರುವಲ್ಲಿ, ನಿಬಂಧಕರು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೊಂದಾಯಿಸತಕ್ಕದ್ದು.

ಉಪಕಲಂ (5) ರಂತೆ ನಿಬಂಧಕರು, ನೋಂದಣಿಯಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಹಾಗೆ ನೋಂದಾಯಿಸಲಾದ ತಿದ್ದುಪಡಿಯ ಪ್ರತಿಯನ್ನು ತಾನು ಸಹಿ ಮಾಡಿ ಮೊಹರು ಹಾಕಿದ ಪ್ರಮಾಣ ಪತ್ರದೊಂದಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಸಹಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರವು ತಿದ್ದುಪಡಿಯು ವಿಧ್ಯುಕ್ತವಾಗಿ ನೊಂದಣಿಯಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

ಉಪಕಲಂ (6) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿಲ್ಲದಿರುವಲ್ಲಿ, ನಿಬಂಧಕರು ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು. ಇದಕ್ಕೆ ತಪ್ಪಿದರೆ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು; ತಿದ್ದುಪಡಿ ನೋಂದಣಿಯನ್ನು ನಿರಾಕರಿಸುವ ಯಾವುದೇ ಆದೇಶವನ್ನು ಸಹಕಾರಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದ ಹೊರತು ಹೊರಡಿಸತಕ್ಕದ್ದಲ್ಲ.

(7) ನಿಬಂಧಕರು (6) ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಿದ ನಿರಾಕರಣೆಯ ಆದೇಶವನ್ನು, ನಿರಾಕರಣೆಯ ಕಾರಣಗಳೊಂದಿಗೆ ಅದನ್ನು ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(8) (6)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಅಪೀಲನ್ನು ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ;–

(ಎ) ಆದೇಶವನ್ನು ನಿಬಂಧಕರು ಹೊರಡಿಸಿರುವಲ್ಲಿ, ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿರುವಲ್ಲಿ, ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ, ಸಲ್ಲಿಸಬಹುದು;

(9) ಉಪವಿಧಿಗಳ ತಿದ್ದುಪಡಿಯು ನೋಂದಣಿಯ ದಿನಾಂಕದಿಂದ ಅಥವಾ ನೋಂದಣಿಯಾಗಿದೆ ಎಂದು ಭಾವಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ವಿ.ಸೂ. ಉಪವಿಧಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮಾನ್ಯ ನಿಬಂಧಕರಿಗೆ ನೀಡುವ ಪತ್ರವೂ ಸೇರಿದಂತೆ ತಂಖ್ತೆ –1 ರಿಂದ 6 ನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ ಆದ www.souharda.coop ನಲ್ಲಿ ಪಡೆಯಬಹುದಾಗಿದೆ.

# ಪ್ರಗತಿ ಪಥದಲ್ಲಿ ಬೆಂಗಳೂರಿನ ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್

ಜೂನ್ 5 ರಂದು ತನ್ನ 9 ನೇ ಸರ್ವಸದಸ್ಯರ ಸಭೆಯನ್ನು ಯಶಸ್ವಿಯಾಗಿ ಜರುಗಿಸಿದ ಬೆಂಗಳೂರಿನ ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ ನಿ., ಬೆಂಗಳೂರು ಇದು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಗೈದು ವರ್ಷದಿಂದ ವರ್ಷಕ್ಕೆ ಪ್ರಗತಿ ಪಥದಲ್ಲಿ ಸಾಗುತ್ತಿರುವ ಸೌಹಾರ್ದ ಸಹಕಾರಿಯಾಗಿದೆ.

ಸಹಕಾರಿಯಲ್ಲಿ ವೇಮನ ಕ್ಯಾಶ್‌ಸರ್ಟಿಫಿಕೇಟ್, ವೇಮನ ಪ್ರಗತಿ ಸರ್ಟಿಫಿಕೇಟ್ ಸಂಚಿತ ಠೇವಣಿ, ವೇಮನ ನಿತ್ಯ ನಿಧಿ, ಚಾಲ್ತಿ ಖಾತೆ ಮುಂತಾದ ಹೆಸರಿನಲ್ಲಿ ಸಂಪನ್ಮೂಲಗಳ ಸಂಗ್ರಹ ಕಾರ್ಯ ಪರಿಣಾಮಕಾರಿ ಯಾಗಿ ನಡೆಯುತ್ತಿದಿದ್ದು ಕಟ್ಟಡ ಸಾಲ, ವಾಹನ ಸಾಲ, ಜಾಮೀನು ಸಾಲ, ಸಂಬಳ ಆಧಾರಿತ ಸಾಲ ವೃತ್ತಿ ಪರರಿಗೆ ಸಾಲ ಚಿನ್ನಾಭರಣ ಸಾಲ ಹೀಗೆ ಅನೇಕ ವಿಧವಾದ ಸಾಲ ನೀಡಲಾಗುತ್ತಿದೆ. ಸದಸ್ಯರಿಗೆ ಹಾಗೂ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದಂತಹ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ 10902 ಲಕ್ಷ ರೂಗಳ ವ್ಯವಹಾರ

**₹ 66.35,627 ಲಾಭ**

ನಡೆಸಿದ ಈ ಸಂಸ್ಥೆಯಲ್ಲಿ 2134.65 ಕೋಟಿರೂಗಳ ದುಡಿಯುವ ಬಂಡವಾಳ 122.35 ಲಕ್ಷ ರೂಗಳ ಷೇರು ಬಂಡವಾಳ, 1881.67 ಲಕ್ಷ ರೂ ಗಳ ಠೇವಣಿಗಳು 695.00 ಲಕ್ಷ ರೂಗಳ ಹೂಡಿಕೆಗಳು, 1501.11 ಸಾಲಗಳು ಹಾಗೂ ಮುಂಗಡಗಳನ್ನು ಹೊಂದಿರುತ್ತದೆ. ಕಳೆದ ಸಾಲಿಗೆ ಹೋಲಿಸಿದರೆ ಪ್ರಸಕ್ತ ಸಾಲಿನ ವ್ಯವಹಾರದ ಅಭಿವೃದ್ಧಿ ದರ ಶೇಕಡಾ 30 ರಷ್ಟಿದೆ.

ಈ ಸಾಲಿನಲ್ಲಿ 66,35,627.ಲಕ್ಷ ರೂಗಳ ಲಾಭಗಳಿಸಿದೆ ಸದಸ್ಯರಿಗೆ ಶೇಕಡಾ 11% ರಂತೆ ಡಿವಿಡೆಂಡ್ ನೀಡಲು ಮುಂದಾಗಿದೆ. ಮುಂಬರುವ ದಿನಗಳಲ್ಲಿ ಸಹಕಾರಿಗೆ ತನ್ನದೇ ಆದ ಸ್ವಂತ ಕಟ್ಟಡ/ನಿವೇಶನ ಹೊಂದುವ ಪ್ರಯತ್ನ ನಡೆಸಿರುತ್ತದೆ.

ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ವಿ. ರೆಡ್ಡಿಯವರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಅನುಭವವುಳ್ಳವ ರಾಗಿದ್ದು ಪ್ರಜ್ಞಾವಂತ ನಿರ್ದೇಶಕರುಗಳ ಸಂಪೂರ್ಣ ಸಹಕಾರ ದೊಂದಿಗೆ ಹಾಗೂ ಪ್ರಾಮಾಣಿಕ ಹಾಗೂ ಶ್ರದ್ಧೆಯಿಂದ ದುಡಿಯುತ್ತಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಡಿ.ಇ. ಪುಟ್ಟರಾಜು ಹಾಗೂ ಸಹಾಯಕ ಸಿಬ್ಬಂದಿ ಯವರ ಸಹಯೋಗದೊಂದಿಗೆ ಸಹಕಾರಿಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವದು ಬೇರೆ ಸಹಕಾರಿಗಳಿಗೆ ಮಾದರಿಯಾಗಿದೆ.

# ಸಹಕಾರಿಗಳು ಶಾಖೆಗಳನ್ನು ತೆರೆಯುವ ಬಗ್ಗೆ ಸೂಚನೆ

ರಾಜ್ಯದ ಕೆಲವು ಸಹಕಾರಿಗಳು ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ತಮಗೆ ತೋರಿದಂತೆ ತಮ್ಮ ಸಹಕಾರಿಗಳ ಶಾಖೆಗಳನ್ನು ತೆರೆಯುತ್ತಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿದೆ. ಈ ಬೆಳವಣಿಗೆಯಿಂದಾಗಿ ಸಹಕಾರಿಗಳು ತಮಗೆ ನೀಡಿದ ಸ್ವಾಯತ್ತತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಂಬ ಅಪಖ್ಯಾತಿಗೆ ಒಳಗಾಗುತ್ತದೆ. ಸೌಹಾರ್ದ ಸಹಕಾರಿಯ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ. ಸರಕಾರ ಹಾಗೂ ಸಾರ್ವಜನಿಕರು ಸಂಶಯ ದೃಷ್ಟಿಯಿಂದ ನೋಡುವಂತಾಗುತ್ತದೆ.

ಇದಕ್ಕೆ ಆಸ್ಪದ ನೀಡದಂತೆ ಶಾಖೆಗಳನ್ನು ತೆರೆಯಲಿಚ್ಛಿಸುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸುತ್ತೋಲೆ ಸಂಖ್ಯೆ 15/2006 ದಿನಾಂಕ : 25.3.2011 ರನ್ನು ಅವಶ್ಯವಾಗಿ ಗಮನಿಸಲು ಕೋರಿದೆ. ಈ ಸುತ್ತೋಲೆಯನ್ನು 2011 ಮಾರ್ಚ್ ಮಾಹೆಯ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಈ ಸುತ್ತೋಲೆಯ ಪ್ರಕಾರ ಯಾವುದೆ ಸಹಕಾರಿಯು ತನ್ನ ಶಾಖೆಯನ್ನು ಪ್ರಾರಂಭಿಸಲು ಉದ್ದೇಶಿಸಿದಲ್ಲಿ, ಶಾಖೆಯನ್ನು ತೆರೆಯುವ ಬಗ್ಗೆ ಸಂಯುಕ್ತ ಸಹಕಾರಿಗೆ ಕಾರ್ಯಸಾಧ್ಯತಾ ವರದಿಯನ್ನು ಕಳುಹಿಸಿ ಅನುಮೋದನೆ ಪಡೆಯಬೇಕು.

ಕಳೆದ ಮೂರು ವರ್ಷ ಲಾಭದಲ್ಲಿರಬೇಕು. ಕಳೆದ ಮೂರು ವರ್ಷಗಳಲ್ಲಿ ಸದಸ್ಯತ್ವದ ವಿವರಗಳಿರಬೇಕು.

ಶಾಸನಬದ್ಧ ಮತ್ತು ಕೊಡಬೇಕಾದ ಬಡ್ಡಿಗಳ ಬಗ್ಗೆ ಪ್ರಾವಧಾನ ಮಾಡಿರಬೇಕು. ಪ್ರಾವಧಾನ ಮಾಡಿದ ಮೇಲೂ ಸಹಕಾರಿಯು ಲಾಭದಲ್ಲಿರಬೇಕು.

ಓವರ್‌ಡ್ಯೂ ಪ್ರಮಾಣ ಸಾಲ ಮತ್ತು ಮುಂಗಡಗಳ ಶೇಕಡಾ 15ನ್ನು ಅಥವಾ ಸ್ವಂತ ಬಂಡವಾಳದ ಶೇಕಡಾ 50ನ್ನು ಮೀರಿರಬಾರದು.

ಆರಂಭಗೊಳ್ಳುವ ಹೊಸಶಾಖೆಯ ಖರ್ಚುವೆಚ್ಚಗಳನ್ನು ಪ್ರಸ್ತುತ ಇರುವ ಶಾಖೆಯು ಮುಂದಿನ ಮೂರು ವರ್ಷಗಳವರೆಗೆ ಭರಿಸುವ ಸಕ್ಷಮವಾಗಿರಬೇಕು.

ಈ ಮಾನದಂಡಗಳನ್ನು ಪಾಲಿಸದೇ ಶಾಖೆಗಳನ್ನು ಆರಂಭಿಸಿದಲ್ಲಿ ಹಾಗೇ ನಿರ್ಣಯ ಕೈಗೊಂಡ ಆಡಳಿತ ಮಂಡಳಿಯ ಮೇಲೆ ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 38(1)(IV)ರಡಿ ಕ್ರಮ ಜರುಗಿಸಲಾಗುತ್ತದೆ. ಅಲ್ಲದೆ ಅಂತಹ ಶಾಖೆಯನ್ನು ರದ್ದುಗೊಳಿಸುವಂತೆ ಸಹಕಾರಿಗೆ ನಿರ್ದೇಶನ ನೀಡುತ್ತದೆ.

# ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆಗಳು

## ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ – 215

ಸಂ: ಆರ್.ಎಸ್.ಆರ್./ಎಕ್ಸೆಮ್.ಸಿ/–3/11–12 ದಿನಾಂಕ: 12/5/2011

(ಸಹಕಾರಿಗಳ ನೊಂದಣಿಗೆ ಸಂಬಂದಿಸಿದಂತೆ ಸಹಕಾರಿಗಳ ನೋಂದಣಿ ಅಧಿಕಾರ ಹೊಂದಿರುವ ನಿಬಂಧಕರ ಎಲ್ಲ ಅಧೀನ ಅಧಿಕಾರಿಗಳಿಗೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ಸಹಕಾರಿಗಳ ನೊಂದಣಿಗೆ ಸಂಬಂದಿಸಿದಂತೆ ಪ್ರಕರಣ 5(3)(ಸಿ) ಅವಕಾಶ ಪಾಲನೆ ಬಗ್ಗೆ ಅನುಸರಿಸಬೇಕಾದ ವಿಧಿವಿಧಾನಗಳ ಬಗ್ಗೆ ಅಧಿನಿಯಮದಲ್ಲಿ ಸ್ಪಷ್ಟವಾಗಿ ವಿವರಿಸಿದಾಗ್ಯೂ ಅಧೀನ ಕಚೇರಿಗಳ ಹಂತದಲ್ಲಿ ಅಧಿಕಾರಿಗಳು ವಿಭಿನ್ನ ವ್ಯಾಖ್ಯಾನ ಮಾಡುತ್ತಿರುವುದು ಹಾಗೂ ಅಧಿನಿಯಮದ ಅವಕಾಶವನ್ನು ಪಾಲನೆ ಮಾಡದಿರುವುದನ್ನು ಗಮನಿಸಿ ಸಹಕಾರ ಸಂಘಗಳ ನಿಬಂಧಕರು ಈ ಕೆಳಕಂಡಂತೆ ಸೂಚನೆಯನ್ನು ನೀಡಿರುತ್ತಾರೆ.

1. ಇನ್ನು ಮುಂದೆ ಯಾವುದೇ ನೋಂದಣಿ ಪ್ರಾಧಿಕಾರಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ಸೌಹಾರ್ದ ಸಹಕಾರಿಯನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಕಾರ್ಯವ್ಯಾಪ್ತಿ ಏನೇ ಇದ್ದರೂ ಸಹಕಾರಿಯು ಎಲ್ಲಿಯೇ ಸ್ಥಿತವಾಗಿದ್ದರೂ ಈಗಾಗಲೆ ರಾಜ್ಯದಲ್ಲಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳ/ಸಹಕಾರ ಸಂಘಗಳ ಹೆಸರಿನ ಸಹಕಾರಿಯನ್ನು ನೊಂದಣಿ ಮಾಡತಕ್ಕದ್ದಲ್ಲ.

2. ನೋಂದಣಿ ಪೂರ್ವದಲ್ಲಿ ಉದ್ದೇಶಿತ ಸಹಕಾರಿಯ ಹೆಸರಿನಲ್ಲಿ ರಾಜ್ಯದ ಇತರೆಡೆಗಳಲ್ಲಿ ಯಾವುದಾದರೂ ಸಹಕಾರಿ ನೊಂದಣಿಯಾಗಿದೆಯೇ ಎಂಬುದನ್ನು ಸಹಕಾರ ಸಂಘಗಳ ನಿಬಂಧಕರ ಕಛೇರಿ/ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ ಲಿಖಿತ ರೂಪದಲ್ಲಿ ಖಚಿತ ಪಡಿಸಿಕೊಂಡು ನಂತರ ಸಹಕಾರಿಯನ್ನು ನೋಂದಣಿ ಮಾಡತಕ್ಕದ್ದು.

ಸಹಿ/–

**(ಎಸ್.ಜಿ. ಹೆಗಡೆ)**
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

## ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ –216

ಸಂ: ಆರ್.ಎಸ್.ಆರ್/ಎಕ್ಸ.ಎಮ್.ಸಿ./33/2011–12 ದಿನಾಂಕ : 16–6–2011

**ವಿಷಯ: ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ಸದಸ್ಯತ್ವ ನಿಬಂಧಕರ ಸ್ಪಷ್ಟೀಕರಣ**

**ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂ/ಆರ್.ಎಸ್.ಆರ್./ಸೌಕಾ/164/ಎಕ್ಸ. ಎಮ್.ಸಿ/2003–04 ದಿನಾಂಕ 06–12–2003**

ಕರ್ನಾಟಕ ಸೌಹಾದ್ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ನೋಂದಣೆಗೊಂಡು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳು ಈ ಕಛೇರಿಗೆ ಹಲವು ಸಂದರ್ಭದಲ್ಲಿ ಮನವಿಮಾಡಿ ಕೆಲವು ಜಿಲ್ಲಾ ಕೇಂದ್ರ ಬ್ಯಾಂಕುಗಳು ಸಹಕಾರಿಗಳಿಗೆ ಸದಸ್ಯತ್ವ ನೀಡುತ್ತಿಲ್ಲವೆಂದು ಈ ಕಛೇರಿಯ ಗಮನಕ್ಕೆ ತಂದಿರುತ್ತವೆ. ಈ ವಿಷಯದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 16 ಇ ಕೆಳಕಂಡಂತಿದೆ.

A firm, a company or any other corporate constituted under any law for the time being inforce including a society registered under the Karnataka Societies Registration Act 1960 ( Karnataka Act 17 of 1960 )

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮವು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಒಂದು ಕಾನೂನು ಆಗಿದೆ.ಮೇಲಿನ ಅವಕಾಶದ ಪ್ರಕಾರ ಯಾವುದೇ ಕಾನೂನು ಅಡಿ ನೋಂದಣಿಯಾದ ಸಂಸ್ಥೆಯು ಸಹಕಾರ ಸಂಘಗಳ ಸದಸ್ಯರಾಗುವ ಅವಕಾಶವಿದೆ. ಈ ಸ್ಪಷ್ಟ ಅವಕಾಶದ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಸದಸ್ಯತ್ವ ಹೊಂದಲು ಅರ್ಹವಾಗಿವೆ. ಈ ಕುರಿತು ಈಗಾಗಲೆ ಉಲ್ಲೇಖದ ದಿನಾಂಕ 6–12–2003 ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಆದ್ದರಿಂದ ಸೌಹಾರ್ದ ಸಹಕಾರಿಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನಲ್ಲಿ ಸದಸ್ಯರಾಗಬಯಸಿದಲ್ಲಿ ಸಂಬಂದಿತ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸದಸ್ಯತ್ವ ನೀಡಬಹುದೆಂದು ಈ ಮೂಲಕ ಸ್ಪಷ್ಟಪಡಿಸಿದೆ.

ಸಹಿ/–

**(ಎಸ್.ಜಿ. ಹೆಗಡೆ)**
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

# ಜೂನ್ ಮಾಹೆಯಲ್ಲಿ ಸಂಯುಕ್ತ ಸಹಕಾರಿಯು ಜಾರಿಮಾಡಿರುವ ಶಾಸನಬದ್ಧ ಕಾರ್ಯಗಳು

ಸೌಹಾರ್ದ ಸಹಕಾರಿಗಳು ಸ್ವಯಂ ನಿಯಂತ್ರಣ ಸಂಸ್ಥೆಗಳಾಗಿ ಮತ್ತು ಯಾವುದೇ ಬಾಹ್ಯ ಹಸ್ತಕ್ಷೇಪವಿಲ್ಲದೆ ಕಾರ್ಯನಿರ್ವಹಿಸಬೇಕೆಂಬುದು ಸೌಹಾರ್ದ ಸಹಕಾರಿ ಅಧಿನಿಯಮದ ಆಶಯವಾಗಿದೆ. ಆದರೆ ಯಾವ ಸಹಕಾರಿ ಸ್ವಯಂ ನಿಯಂತ್ರಣವಿಲ್ಲದೆ ಕಾರ್ಯನಿರ್ವಹಿಸುತ್ತದೆಯೋ ಅಂಥಹ ಸಹಕಾರಿಯ ವಿರುದ್ಧ ಶಾಸನಬದ್ಧ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗಿದ್ದು, ಜೂನ್ ಮಾಹೆಯಲ್ಲಿ ಈ ಕೆಳಗಿನ ಸೌಹಾರ್ದ ಸಹಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆ:

- **ಗ್ರಾಮೀಣಾ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಸ್ತಾಪುರ** ಇದರ ವಿರುದ್ಧ ನಿರ್ದೇಶಕರುಗಳು ದೂರನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿ ತಿಪ್ಪಾರೆಡ್ಡಿ ಪುರ್ಮೆ ಇವರನ್ನು ಪರಿಶೀಲನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ನಂತರ ಹೆಚ್ಚಿನ ಮಾಹಿತಿಗಾಗಿ ಶ್ರೀಕಾಂತ, ಕಾನೂನು ವಿಭಾಗದ ಅಧಿಕಾರಿ ಇವರನ್ನು ಪರಿವೀಕ್ಷಣಾಧಿಕಾರಿಗಳಾಗಿ ನೇಮಕ ಮಾಡಲಾಗಿತ್ತು ಅವರು ತಮ್ಮ ಪರಿವೀಕ್ಷಣಾ ವರದಿಯನ್ನು ಸಲ್ಲಿಸಿರುತ್ತಾರೆ. ನಂತರದಲ್ಲಿ ಈ ಸಹಕಾರಿಯ ಏಳು ಜನ ಆಡಳಿತ ಮಂಡಳಿ ಸದಸ್ಯರು ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯನ್ನು ಏಕೆ ರದ್ದುಗೊಳಿಸಬಾರದು ಎಂದು ಕಾರಣ ಕೇಳಿ ನೋಟೀಸ್ ನೀಡಲಾಗಿದೆ.
- **ನಿಸರ್ಗ ಜನ ಶಕ್ತಿ ಸೌಹಾರ್ದ ಸಹಕಾರಿ ನಿ., ದಾವಣಗೆರೆ** ಇದರ ವಿರುದ್ಧ ಸದಸ್ಯರ ದೂರಿನ ಹಿನ್ನೆಲೆಯಲ್ಲಿ ಸಹಕಾರಿಗೆ ಶ್ರೀಯುತ ಉಮೇಶ್ ಶೆಟ್ಟಿ, ಸನ್ನದುಲೆಕ್ಕಪರಿಶೋಧಕರು ಇವರನ್ನು ಪರಿವೀಕ್ಷಕರಾಗಿ ನೇಮಕ ಮಾಡಲಾಗಿದ್ದು, ಪರಿವೀಕ್ಷಕರು ಸದರಿ ಸಹಕಾರಿಯು ಸಂಯುಕ್ತ ಸಹಕಾರಿಗೆ ಒದಗಿಸಿರುವ ನೋಂದಾಯಿತ ಕಛೇರಿಯ ವಿಳಾಸದಲ್ಲಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಪರಿವೀಕ್ಷಕರ ವರದಿಯ ಹಿನ್ನೆಲೆಯಲ್ಲಿ ಸಹಕಾರಿಯ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.
- **ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕೋಲಾ** ಇದರ ವಿರುದ್ಧ ಬಂದ ದೂರಿನ ಹಿನ್ನೆಲೆಯಲ್ಲಿ ಸಹಕಾರಿಯ ಪರಿವೀಕ್ಷಣೆಗೆ ಶ್ರೀಯುತ ರವಿ ಕಾಮತ್, ಸನ್ನದುಲೆಕ್ಕಪರಿಶೋಧಕರು ಇವರನ್ನು ನೇಮಕ ಮಾಡಲಾಗಿದೆ. ಪರಿವೀಕ್ಷಕರು ವರದಿಯನ್ನು ಸಲ್ಲಿಸಬೇಕಿದ್ದು, ಪರಿವೀಕ್ಷಕರ ವರದಿಯನ್ನಾಧರಿಸಿ ಮುಂದಿನ ಕ್ರಮವಿಡಲಾಗುವುದು.
- **ಧಾರವಾಡ ಡೈರಿ ಫಾರ್ಮಿಂಗ್ ಸೌಹಾರ್ದ ಸಹಕಾರಿ ನಿ., ಧಾರವಾಡ** ಸಹಕಾರಿಯು ತಾನು ಹೊಂದಿರುವ ಆಸ್ತಿಯ ಪರಭಾರೆಯಲ್ಲಿ ಸಹಕಾರಿಗೆ ಅಪಾರ ಪ್ರಮಾಣದ ನಷ್ಟವನ್ನುಂಟುಮಾಡಿದೆ ಎಂಬ ಪರಿವೀಕ್ಷಕರ ವರದಿಯ ಆಧಾರದ ಮೇಲೆ ಮತ್ತು ಲೆಕ್ಕಪರಿಶೋಧನೆಯನ್ನು ನಡೆಸದೆ ಇರುವ ಕಾರಣ ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ.



- **ಈ ಕೆಳಕಂಡ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ಉಲ್ಲಂಘಿಸಿ ಶಾಖೆಗಳನ್ನು ತೆರೆದಿರುವ ಹಿನ್ನೆಲೆಯಲ್ಲಿ ನಿರ್ದೇಶನ ನೀಡಲಾಗಿದೆ.**

1. ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ
2. ಶ್ರೀ ಬಿರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಯಕ್ಸಾಂಬ
3. ಸಿದ್ದಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಿಜಾಪುರ
4. ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ
5. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ

**ಈ ಕೆಳಗಿನ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ಕೈಗೊಳ್ಳಲಾಗಿದೆ.**

1. ಚೈತನ್ಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.
2. ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ಲಿ., ಬೆಂಗಳೂರು.
3. ನಿಖಿರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.
4. ಕಣ್ವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.
5. ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು.

- **ವಿಜಯಪರ್ವ ಪತ್ತಿನ ಸೌಹಾರ್ದ ಸಹಕಾರಿ ನಿ., ಹೋಸಪೇಟೆ** ಇದು ನೋಂದಣಿಯ ಪೂರ್ವದಲ್ಲೇ ಶಾಖೆಗಳನ್ನು ತೆರೆದಿರುವುದು ಮತ್ತು ಬೇರೊಂದು ಸಹಕಾರಿಯ ನೋಂದಣಿಪತ್ರವನ್ನು ದುರುಪಯೋಗಪಡಿಸಿಕೊಂಡು ವ್ಯವಹಾರ ನಡೆಸಿರುವುದರಿಂದ ವಿಜಯಪರ್ವ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಇದನ್ನು ಸಮಾಪನೆಗೊಳಿಸಲು ಮಾನ್ಯ ನಿಬಂಧಕರಿಗೆ ಸಂಯುಕ್ತ ಸಹಕಾರಿಯು ಶಿಫಾರಸ್ಸು ಮಾಡಿರುತ್ತದೆ.
- **ಶ್ರೀ ವೆಂಕಟೇಶ್ವರ ಸೌಹಾರ್ದ ಸಹಕಾರಿ ನಿ., ಬೆಂಗಳೂರು** ಇದರ ವಿರುದ್ಧ ವ್ಯಾಪಕ ದೂರಿನ ಹಿನ್ನೆಲೆಯಲ್ಲಿ ಸದರಿ ಸಹಕಾರಿಯ ವಿರುದ್ಧ ವಿಚಾರಣೆ ನಡೆಸಲು ಮಾನ್ಯ ನಿಬಂಧಕರಿಗೆ ಶಿಫಾರಸ್ಸು ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ತೀರ್ಮಾನಿಸಿರುತ್ತದೆ.

## ತರಬೇತಿ ಕಾರ್ಯಕ್ರಮ

ಜುಲೈ 29, 30, 2011ರಂದು ಬೆಂಗಳೂರಿನಲ್ಲಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗಾಗಿ ಪ್ರವೇಶ ತರಬೇತಿ ಹಾಗೂ ಗುಣಮಟ್ಟ ನಿರ್ವಹಣಾ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಭಾಗವಹಿಸಲು ಅಪೇಕ್ಷಿಸುವವರು ಪ್ರತಿನಿಧಿ ಶುಲ್ಕ ₹ 100ರೊಂದಿಗೆ ತಮ್ಮ ಹೆಸರನ್ನು ನೊಂದಾಯಿಸಲು ಸೂಚಿಸಿದೆ.

ಬೆಳಗಾವಿ ಹಾಗೂ ಮೈಸೂರು ವಿಭಾಗ ದವರು ದಿನಾಂಕ:29-07-2011 ರಂದು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

ಬೆಂಗಳೂರು ಮತ್ತು ಗುಲ್ಬರ್ಗ ವಿಭಾಗದವರು ದಿನಾಂಕ : 30-07-2011 ರಂದು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು.


ಯೋಗಾ ತರಬೇತಿ


ಮನೋರಂಜನಾ ಕಾರ್ಯಕ್ರಮ


ಬಾದಾಮಿಯಲ್ಲಿ


ಧಾರವಾಡದ ಸಾಧನಕೇರಿಯಲ್ಲಿ


ಧಾರವಾಡದ ಸಾಧನಕೇರಿಯಲ್ಲಿ

... 7ನೇ ಪುಟದಿಂದ

ಅಡಿಗೆ ತಯಾರಿಕಾ ವ್ಯವಸ್ಥೆ (ಪ್ರತಿದಿನ 2 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾನ್ಹದ ಬಿಸಿಯೂಟ ಸಿದ್ದಪಡಿಸುವ ಬೃಹತ್ ವ್ಯವಸ್ಥೆ)ಗಳನ್ನು ಅಧ್ಯಯನ ಮಾಡಲಾಯಿತು.

**ಮುಕ್ತಾಯ ಸಮಾರಂಭ** : ಸಮಾರೋಪ ಭಾಷಣ ಮಾಡಿದ ಧಾರವಾಡ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಬಸವರಾಜ ಅನಗೊಂಡ ರವರು ಮಾತನಾಡಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಗೆ ಆದ್ಯತೆಯಿದ್ದಾಗ ಮಾತ್ರ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಧಾರವಾಡ ಹಾಲು ಉತ್ಪಾದಕರ ಒಕ್ಕೂಟದ ಪ್ರಗತಿಯನ್ನೆ ಉಧಾಹರಣೆಯಾಗಿ ವಿವರಿಸುತ್ತ ನುರಿತ ಕಾರ್ಯಕರ್ತರುಗಳು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯ ಬೆನ್ನೆಲುಬು. ಸಿಬ್ಬಂದಿಗೆ ನಿರಂತೆ ತರಬೇತಿ ನೀಡುತ್ತಿರುವ ವ್ಯವಸ್ಥೆಯನ್ನು ಸಹಕಾರಿ ಸಂಸ್ಥೆಗಳು ಅಳವಡಿಸಿಕೊಳ್ಳಬೇಕು. ಸಂಯುಕ್ತ ಸಹಕಾರಿಯ ಈ ನಿರಂತರ ಪ್ರಯತ್ನದಿಂದಾಗಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆಯುತ್ತಿದೆ ಇದಕ್ಕಾಗಿ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳನ್ನು ಅಭಿನಂದಿಸುತ್ತೇನೆ ಎಂದರು. ತರಬೇತಿಯಲ್ಲಿ ಭಾಗವಹಿಸಿದವರೆಲ್ಲ ತಮ್ಮ ತಮ್ಮ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಶ್ರಮಿಸಬೇಕೆಂದು ಕರೆನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಈ ಬಾರಿಯ ತರಬೇತಿ ಈ ಹಿಂದಿನ ಎಲ್ಲ ತರಬೇತಿಗಿಂತಲೂ ಉನ್ನತಮಟ್ಟದ್ದಾಗಿತ್ತೆಂದು ಭಾಗವಹಿಸಿದವರ ಅಭಿಪ್ರಾಯದಿಂದ ತಿಳಿದು ಬರುತ್ತಿದೆ. ನಿಮ್ಮ ಭಾಗವಹಿಸುವಿಕೆ ಹಾಗೂ ಅದರ ಪ್ರಯೋಜನ ಪಡೆದು ನೀವೆಲ್ಲ ಸೌಹಾರ್ದ ಸಹಕಾರಿಯ ಸೈನಿಕರಾಗಿ ಕಾರ್ಯನಿರ್ವಹಿಸಿ ನಂತರ ಕರ್ನಲ್ ಆಗಿ, ಮೇಜರ್ ಆಗಿ ಕಮಾಂಡರ್ ಆಗಿ ಉನ್ನತ ಪದವಿಯನ್ನು ಹೊಂದಿರಿ ಎಂದು ಆಶಿಸುತ್ತ ಸಂಯುಕ್ತ ಸಹಕಾರಿಯ ಇ ಪ್ರಯತ್ನ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಒತ್ತುಕೊಡುವುದಾಗಿದೆ. ಈ ಕ್ಷೇತ್ರದ ಗುಣಮಟ್ಟ ಸುಧಾರಣೆಯ ಕಾರ್ಯ ನಿಮ್ಮಿಂದಾಗಬೇಕಿದೆ ಎಂದು ತಿಳಿಸಿ ಎಲ್ಲರಿಗೂ ಶುಭ ಹಾರೈಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಎಷ್ಟೆ ಸಂಪತ್ತಿದ್ದರೂ, ಬುದ್ದಿವಂತನಾದರೂ, ವಿದ್ಯಾವಂತನಾದರೂ ಸಮಯ ಪ್ರಜ್ಞೆಯನ್ನು ಬೆಳೆಸಿಕೊಳ್ಳದಿದ್ದರೆ ಏನೂ ಪ್ರಯೋಜನವಿಲ್ಲ. ಸಮಯದ ಅಗತ್ಯತೆಗನುಸಾರವಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ತರಬೇತಿಯನ್ನು ಈ ಕಾರ್ಯಕ್ರಮದಲ್ಲಿ ಒದಗಿಸಲಾಗಿದೆ. ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಹೆಚ್ಚು ಮಹತ್ವ ನೀಡಿ ಕಾರ್ಯಕ್ರಮ ನಡೆಸಲಾಗಿದೆ. ಈ ಎಲ್ಲ ವಿಷಯಗಳ ಪೂರ್ಣ ಪ್ರಯೋಜನ ಪಡೆದ ನೀವುಗಳು ಉತ್ತಮ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ ನಿಮ್ಮ ಸಹಕಾರಿಯ ಅಭಿವೃದ್ಧಿಗೆ ಕಾರಣರಾಗಬೇಕೆಂದು ಕರೆನೀಡಿದರು.

ಜಿಲ್ಲಾ ತರಬೇತಿ ಸಂಸ್ಥೆ ಧಾರವಾಡ ಇದರ ಪ್ರಾಂಶುಪಾಲ ಶ್ರೀ ಕೆ.ಕೆ.ಎಸ್.ವಿ ಪ್ರಸಾದರವರು ಮಾತನಾಡಿ ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿತ್ತು. ಬಹಳ ಉತ್ತಮವಾಗಿ ಎಲ್ಲ ಕಾರ್ಯಕ್ರಮಗಳನ್ನು ಹೊಂದಿಸಲಾಗಿತ್ತು. ಮತ್ತೊಮ್ಮೆ ಕಾರ್ಯಕ್ರಮ ನಡೆಸುವುದಾದರೆ ಧಾರವಾಡದ ಈ ತರಬೇತಿ ಕೇಂದ್ರ ನಿಮಗೆ ಸ್ವಾಗತವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕ ಶ್ರೀ ರಾವಸಾಹೇಬ್ ಪಾಟೀಲ್, ಶ್ರೀ ಬಾಸ್ಕರ ಹೆಗಡೆ ಕಾಗೇರಿ, ಶ್ರೀ ಸಾಗರ ಚವಜ, ಶ್ರೀ ವೆಂಕಟೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಅನಂತ ಕುಲಕರ್ಣಿ, ಶ್ರೀ ದೇಶಪಾಂಡೆ, ವಿಜಯಲಕ್ಷ್ಮಿ ಅರ್ಬನ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮನೋಜ ಜೋಶಿ ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿ ಶ್ರೀ ಪಿ.ಆರ್. ಗೋಡಖಿಂಡಿ ಮುಂತಾದವರು ಭಾಗವಹಿಸಿದ ಈ ಕಾರ್ಯಕ್ರಮವನ್ನು ಶ್ರೀ ಭಟ್‌ವರು ನಿರೂಪಿಸಿ ನಡೆಸಿದರು. ಶ್ರೀ ಧರಣೇಶ್‌ರವರು ಸ್ವಾಗತ ಮಾಡಿದರು. ಶ್ರೀ ಮಂಜುನಾಥ್ ಪ್ರಾಸ್ತಾವಿಕ, ಶ್ರೀ ಶೈಲ ಮಠಪತಿಯವರು ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪ್ರತಿನಿಧಿಗಳ ಪರವಾಗಿ ಮಾತನಾಡಿದ ಕು.ನೇತ್ರ.ಕೆ. ಶ್ರೀಮತಿ ಭಾವನಾ ಕು.ಬಸವರಾಜೇಶ್ವರಿ, ಕು. ಪ್ರೀತಿ ಆರ್ ಸ್ವಾಮಿ ಶ್ರೀ ಪಿ.ನಾಗಭೋಷಣಗೌಡ ಶ್ರೀ ಆನಂದ ನಾಯಕ ಶ್ರೀ ತಾರಾಸಿಂಗ ಹರಿಶ್ಚಂದ್ರ ರಾಠೋಡ ಶ್ರೀ ಅಜಿತ ಶ್ರೀ ಅಭಿಷೇಕ್ ಶ್ರೀ ನೇಮಿನಾಥ ಜಯಪಾಲ ತಪಕೀರೆ ರವರುಗಳೆಲ್ಲ ಕಾರ್ಯಕ್ರಮ ಬಹಳೆ ಪ್ರಯೋಜನಕಾರಿಯಾಗಿದೆ. ವ್ಯಕ್ತಿತ್ವ ವಿಕಸನವೆಂಬ ಶಿರೋನಾಮೆಗನುಗುಣವಾಗಿ ಕಾರ್ಯಕ್ರಮ ನಡೆಸಲಾಗಿದೆ. ಎಲ್ಲವೂ ವ್ಯವಸ್ಥಿತವಾಗಿ ಉತ್ತಮ ರೀತಿಯಲ್ಲಿ ಸುಸಜ್ಜಿತ ರೀತಿಯಲ್ಲಿ ಸಂಘಟಿಸಲಾಗಿತ್ತು. ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ನಾವುಗಳು ಹಿಂದೆಂದೂ ನೋಡಿರಲಿಲ್ಲ. ಇದೊಂದು ಸಂಯುಕ್ತ ಸಹಕಾರಿಯ ವೈಶಿಷ್ಠತೆ ಎಂದು ತಿಳಿಸಿದರು. ನಾವು ಇಲ್ಲಿಗೆ ಬಂದಾಗ ಕಾರ್ಯಕ್ರಮ ಇಷ್ಟೊಂದು ಪರಿಣಾಮಕಾರಿಯಾಗಬಹುದೆಂದು ಅನಿಸಿರಲಿಲ್ಲ ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. ಕೊನೆಯಲ್ಲಿ ಪ್ರತಿನಿಧಿಗಳಿಗೆ ಧಾರವಾಡ ಪೇಡ, ಪ್ರಶಸ್ತಿಪತ್ರ ಹಾಗೂ ಸಂಯುಕ್ತ ಸಹಕಾರಿಯ ಕಾಣಿಕೆಯಾಗಿ ಬ್ಯಾಗುಗಳನ್ನು ವಿತರಿಸಲಾಯಿತು.

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಾಗಿ ಸಂಪೂರ್ಣ ವ್ಯಕ್ತಿತ್ವ ವಿಕಸನದ

# ಧಾರವಾಡದಲ್ಲಿ 10 ದಿನಗಳ ಯಶಸ್ವಿ ತರಬೇತಿ ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಧಾರವಾಡ ಜಿಲ್ಲಾ ತರಬೇತಿ ಕೇಂದ್ರ ಗಾಂಧೀನಗರ ಧಾರವಾಡದಲ್ಲಿ ದಿನಾಂಕ 20-6-2011 ರಿಂದ ಪ್ರಾರಂಭವಾಗಿದ್ದ ಹತ್ತು ದಿನಗಳ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮವು ದಿನಾಂಕ 29 /6/2011 ರಂದು ಮುಕ್ತಾಯವಾಯಿತು.

**ಉದ್ಘಾಟನಾ ಸಮಾರಂಭ :** ಉದ್ಘಾಟನಾ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಆಗಮಿಸಿದ್ದ ವಿಧಾನ ಪರಿಷತ ಸದಸ್ಯ ಹಾಗೂ ಕರ್ನಾಟಕ ಸಹಕಾರಿ ಮಾರಾಟ ಮಹಾಮಂಡಳಿಯ ಅಧ್ಯಕ್ಷ ಶ್ರೀ ಜಿ.ಎಸ್. ಹಾಲಪ್ಪಾಚಾರರವರು ಮಾತನಾಡಿ ಸಹಕಾರಿ ಕ್ಷೇತ್ರದಿಂದ ಮಾತ್ರ ಸಾಮಾನ್ಯ ಜನರ ಆರ್ಥಿಕ ಅಭಿವೃದ್ಧಿ ಸಾಧ್ಯ. ಇಂತಹ ಅವಕಾಶವುಳ್ಳ ಸಹಕಾರಿ ಸಂಸ್ಥೆಗಳ ಕಾಯ ನಿಷ್ಕ್ರೀಯವಾಗಬಾರದು. ನಿರಂತರ ಸೇವೆ ನೀಡುವ ಆರ್ಥಿಕ ಕೇಂದ್ರಗಳಾಗಿ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕು. ಸಹಕಾರಿ ಸಂಸ್ಥೆಗಳಿಗೆ ಇದೊಂದು ಉತ್ತಮ ಅವಕಾಶ. ಇದಕ್ಕಾಗಿ ಸಹಕಾರಿ ಸಂಸ್ಥೆಗಳ ಕಾರ್ಯಕತೃರುಗಳಿಗೆ ಸಿಬ್ಬಂದಿಯವರಿಗೆ ಶಿಕ್ಷಣ ತರಬೇತಿ ಅಗತ್ಯ ಎಂದು ತಿಳಿಸಿ ಇಂತಹ ನಿರಂತರ ತರಬೇತಿ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಹಮ್ಮಿಕೊಳ್ಳುತ್ತಿರುವ ಸಂಯುಕ್ತ ಸಹಕಾರಿಯ ಪ್ರಯತ್ನದಿಂದ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಪ್ರಗತಿಯನ್ನು ಸಾದಿಸುತ್ತಿದೆ ಎಂದು ತಿಳಿಸಿದರು.

ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪುನಶ್ಚೇತನ ಕಾರ್ಯಕ್ರಮದಲ್ಲಿ ಸಹಕಾರಿಗಳ ಹಾಗೂ ಅಧಿಕಾರಿಗಳ ಶ್ರಮದ ಬಗ್ಗೆ ವಿವರಿಸಿ ಎಲ್ಲರ ಪರಿಶ್ರಮದಿಂದ ಬ್ಯಾಂಕು ಮತ್ತೆ ಉತ್ತಮ ಸ್ಥಿತಿ ತಲುಪುವಂತಾಯಿತು ಎಂದು ತಿಳಿಸಿ ಸಿಬ್ಬಂದಿಯವರು ಈ ತರಬೇತಿಯ ಉತ್ತಮ ಪ್ರಯೋಜನ ಪಡೆಯಲು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀಎಸ್.ಆರ್.ಸತೀಶಚಂದ್ರರವರು ಮಾತನಾಡಿ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ರಾಜ್ಯಾದ್ಯಂತ ಪ್ರವಾಸ ಮಾಡಿದ ಸಂದರ್ಭಗಳಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಸೂಚಿಸಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರಾಯೋಗೀಕವಾಗಿ ಪ್ರಪ್ರಥಮವಾಗಿ ಗದಗ ಜಿಲ್ಲೆಯ ಕೃಷಿವಿಜ್ಞಾನ ಕೇಂದ್ರ ಹುಲಕೋಟಿಯಲ್ಲಿ 2009 ರಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ



ತರಬೇತಿ ಕಾರ್ಯಕ್ರಮದ ಉದ್ಘಾಟನೆ

ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಲಾಗಿದೆ. ನಂತರದಲ್ಲಿ ಕುಪ್ಪಳ್ಳಿ, ಕೆಮ್ಮಣಗುಂಡಿ, ಮೈಸೂರುಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ತಂಡದಿಂದ ತಂಡಕ್ಕೆ ಉತ್ತಮ ಪ್ರತಿಕ್ರೀಯೆಗಳು ಬರುತ್ತಿದ್ದು ಭಾಗವಹಿಸಿದ ಪ್ರತಿನಿಧಿಗಳು ಸೌಹಾರ್ದ ಸಹಕಾರಿಗಳ ಆಸ್ತಿಗಳಾಗಿ ಪರಿವರ್ತಿತರಾಗಿರುವುದು ಸಂಯುಕ್ತ ಸಹಕಾರಿ ಪ್ರಯತ್ನ ಫಲಕಾರಿಯಾಗಿದೆ.ಸಂತೋಷವಾಗಿದೆ. ಈ 5ನೇ ತಂಡದಲ್ಲಿಯೂ ಸಹಕಾರಿಗಳ ಸಿಬ್ಬಂದಿಯವರು ಭಾಗವಹಿಸಲು ಹೆಚ್ಚಿನ ಬೇಡಿಕೆ ಬಂದಿದ್ದು 45 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಭಾಗವಹಿಸಿದ ಪ್ರತಿನಿಧಿಗಳು ಶ್ರದ್ಧೆಯಿಂದ ಭಾಗವಹಿಸಿ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲು ಕರೆನೀಡಿದರು.

ಸಮಾರಂಭದಲ್ಲಿ ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲ ಶ್ರೀ ಕೆ.ಕೆ.ಎಸ್.ವಿ. ಪ್ರಸಾದರವರು ಮಾತನಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ರವಿ ಯಲಿಗಾರರವರು ಸ್ವಾಗತಿಸಿದರು. ಶ್ರೀ ವಿ.ಜೆ. ಕಾರಕೂನರವರು ಪ್ರಸ್ತಾವಿಕ ಭಾಷಣ ಮಾಡಿದರು. ಶ್ರೀ ವೈ.ಕುಮಾರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ವಿಜಯಲಕ್ಷ್ಮೀ ಅರ್ಬನ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಪ್ರಕಾಶ ನಾಜರೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮನೋಜ ಜೋಶಿ, ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಪಡಚಣ್ಣವರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ.ಆರ್. ಗೋಡಖಿಂಡಿ ಮುಂತಾದ ಅನೇಕ ಗಣ್ಯರು ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ಒಟ್ಟಾರೆ ರಾಜ್ಯದ 18 ಜಿಲ್ಲೆಗಳ 39 ಸೌಹಾರ್ದ ಸಹಕಾರಿಗಳ 43 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಹಕಾರಿ ಚಳುವಳಿ ಬೆಳೆದು ಬಂದ ದಾರಿ, ಸಹಕಾರಿ ತತ್ವಗಳು, ಸಹಕಾರಿ ಆಡಳಿತ, ಸೌಹಾರ್ದ ಸಹಕಾರಿ ಕಾಯ್ದೆ-ಹಳೆಯ ಕಾಯ್ದೆಯ ಪ್ರಮುಕ ವ್ಯತ್ಯಾಸಗಳು, ಸಾಲ ಪತ್ರಗಳ ದಾಖಲಾತಿ,ಸಾಲ ವಸೂಲಾತಿ ಕ್ರಮಗಳು. ಪರಿಣಾಮಕಾರಿ ಉತ್ತಮ ಸಂವಹನ, ಪರಿಸರ ಸಂರಕ್ಷಣೆಯಲ್ಲಿ ಸಹಕಾರಿಗಳ ಪಾತ್ರ, ಮಾಧ್ಯಮದವರ ಜೊತೆ ಸಹಕಾರಿಗಳ ಸಂಬಂದ, ಕಚೇರಿ ಆಡಳಿತ ನಿರ್ವಹಣೆ, ಸಮಯ ನಿರ್ವಹಣೆ ,ಒತ್ತಡ ನಿರ್ವಹಣೆ,ಆಂತರಿಕ ಸಂಬಂದಗಳ ನಿರ್ವಹಣೆ, ಆಡಳಿತದಲ್ಲಿ ವೃತ್ತಿಪರತೆ, ಸಂಪನ್ಮೂಲಗಳ ಸಂಗ್ರಹಣೆ, ಕಿರುಹಣಕಾಸು ಯೋಜನೆಗಳು, ಬಡ್ಡಿಯೇತರ ಆದಾಯಗಳು, ಗ್ರಾಹಕ ಸಂಬಂದಗಳ ನಿರ್ವಹಣೆ ಮುಂತಾದ ವಿಷಯಗಳ ಭೋಧನೆಯ ಜೋತೆಗೆ ಮಾನಸಿಕ ವಿಕಸನ ವಿಷಯಗಳು, ಯೋಗ ಶಿಬಿರ ಹಾಗೂ ಸಾಮೋಹಿಕ ಚರ್ಚೆ ಮತ್ತು ಪ್ರಾಯೋಗಿಕ ವಿಷಯಗಳನ್ನು ಅಳವಡಿಸಲಾಗಿತ್ತು.

**ಅಧ್ಯಯನ ಕಾರ್ಯಕ್ರಮ :** ಧಾರವಾಡ ಅರ್ಬನ್ ಸೌಹಾರ್ದ ಸಹಕಾರಿ, ವಿಜಯಲಕ್ಷ್ಮಿ ಅರ್ಬನ್ ಸೌಹಾರ್ದ ಸಹಕಾರಿ ಧಾರವಾಡ, ಧಾರವಾಡ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಜನಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಬಾದಾಮಿ ಇವುಗಳ ಕಾರ್ಯ ಚಟುವಟಿಕೆಗಳನ್ನು ಅಧ್ಯಯನ ಮಾಡಲಾಯಿತು. ಜೊತೆಗೆ ವರಕವಿ ದ.ರಾ.ಬೆಂದ್ರೆಯವರ ಮನೆ ಸಾಧನಕೇರಿ, ಇಸ್ಕಾನ್ ಕೇಂದ್ರದ ಬಹುದೊಡ್ಡ

10ನೇ ಪುಟಕ್ಕೆ...



ಅಧ್ಯಯನ ಪ್ರವಾಸ



ಐಹೋಳೆಯಲ್ಲಿ

